ಅಪರಂಜಿ

ಜುಲೈ 2003

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಎಂ.ಸಿ. ಅಂಟಿನ

ಲೈಲಾ

ಶೋಭಾ ಪ್ರಮೋದ್

ಹೆಚ್. ಗೋಪಾಲಕೃಷ್ಣ

ಬೇಲೂರು ರಾಮಮೂರ್ತಿ

ಭಕ್ತ

ಎಸ್.ಎನ್. ಶಿವಸ್ವಾಮಿ

ಭುವನೇಶ್ವರಿ ಹೆಗಡೆ

ಶಿವು

ಶ್ರೀನಿವಾಸ ವೈದ್ಯ

ಜಯಂತ ಕಾಯ್ಕಿಣಿ

ಕಮಲಾ ರಾಮಸ್ವಾಮಿ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:

ಬಿಡಿ ಪ್ರತಿ: ರೂ. 5.00

ವಾರ್ಷಿಕ ಚಂದಾ ರೂ. 60

ಹತ್ತು ವರ್ಷದ ಚಂದಾ ರೂ. 500

Ph: 3345259
email : aparanji@hotmail.com
website : aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಜುಲೈ - 2003 ಸಂಚಿಕೆ - 10

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



○ ಪ್ರಕಾಶ್

'ಗ್ರಾಮೀಣ ಕೃಪಾಂಕ'
- ಶೀರ್ಷಿಕೆ

ಇದು ಕೃಪೆಗಿಂತ 'ಹಕ್ಕು' ಆಗಿದೆ!!

★★★

ನ್ಯಾಯಾಲಯಗಳ ಕಟ್ಟಡ ಸಂರಕ್ಷಣೆ
- ಸುದ್ದಿ

ನ್ಯಾಯದ ಸಂರಕ್ಷಣೆಯೂ ಆಗಲಿ!!

★★★

ಇಸ್ಕಾನ್ ದೇಗುಲದ ಭದ್ರತಾ ಸಿಬ್ಬಂದಿಯಿಂದ ಹಲ್ಲೆ; ದೂರು
- ಪತ್ರಿಕೆ

ಹರೇ ರಾಮಾ!!

★★★

'ಮಂಗಳನ ಅಂಗಳಕ್ಕೆ ನೆಗೆತ'
- ಸ್ಪೇಸ್ ಸುದ್ದಿ

ಶೀರ್ಷಿಕೆ ಅಂದ್ರೆ ಹೀಗಿರಬೇಕು!

★★★

ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನ
- ಸುದ್ದಿ

ಸೇದುವವರಿಗೆ ಕನಿಷ್ಠ ಕಾಂಪನ್ಸೇಷನ್??

★★★

ನಗರಕ್ಕೆ ಐದು ದಿನಕ್ಕೊಮ್ಮೆ ನೀರು ಸಂಭವ
- ಸುದ್ದಿ

ಜನರಲ್ಲಿ 'ಕಾವೇರಿ' ದಂತೆಯೇ!!

★★★

ಬಡತನ ರಾಷ್ಟ್ರದ ಬದ್ಧ ವೈರಿ
- ರಾಷ್ಟ್ರಪತಿ

ಇದು ನಮಗೆ ಎಂದೋ ಗೊತ್ತಾಗಿತ್ತು!!

★★★

''ವಿಶ್ವಶಾಂತಿಗಾಗಿ ನೊಬೆಲ್ ಪ್ರೈಸ್ ಪಡೆದ ಅಮೆರಿಕದ ರಾಷ್ಟ್ರಪತಿ ಯಾರು?''

ಕರ್ನಾಟಕ ಪೋಲೀಸ್ ಕಾನ್‌ಸ್ಟೆಬಲ್ ಹುದ್ದೆ ಪರೀಕ್ಷೆಯಲ್ಲಿ ಪ್ರಶ್ನೆ!!

★★★

''ಲಿಬ್''ನವರ ಹಾಡು

ಹೆಂಡತಿ
ಗಂಡನಿಗೆ
ಹೊಡೆದರೆ
ಶೌರ್ಯ
ಗಂಡ
ಹೆಂಡತಿಗೆ
ಹೊಡೆದರೆ
ಕ್ರೌರ್ಯ
ಅಲ್ಲವೇನೋ
ಆರ್ಯ?

- ಗೋಪಾಲಿ

ನಮ್ಮ ನಿಮ್ಮಲ್ಲಿ

ಇಪ್ಪತ್ತರ ಹರೆಯ ಹತ್ತಿರವಾಗುತ್ತಿದ್ದಂತೆ ಯುವಕ ಯುವತಿಯರಿಗೆ ಒಂದು ಐಡೆಂಟಿಟಿ ಕ್ರೈಸಿಸ್ ಉಂಟಾಗುವುದಂತೆ. ಅಪರಂಜಿಯೇನು ಇದಕ್ಕೆ ಹೊರತಲ್ಲ. ಕಳೆದ ಎರಡು ದಶಕಗಳಲ್ಲಿ ನಗೆ ಸಾಹಿತ್ಯದ ವಿವಿಧ ಮುಖಗಳನ್ನು ಓದುಗರಿಗೆ ಪರಿಚಯಿಸುವ, ನಗೆ ಸಾಹಿತ್ಯದ ರಸಾನುಭವದಲ್ಲಿ ಉತ್ತಮ ಅಭಿರುಚಿಯನ್ನು ಓದುಗರಲ್ಲಿ ಬೆಳೆಸುವ, ಬೆಳಗಿಸುವ ಯತ್ನ ಅಪರಂಜಿಯಲ್ಲಿ ನಿರಂತರವಾಗಿ ನಡೆದು ಬಂದಿದೆ. ಆದರೂ ಕಳೆದ ತಿಂಗಳ, ಎನ್.ಆರ್.ವಿ. ರಾಯರ ಪತ್ರ ನಮ್ಮ ಕಂಪ್ಲೆಸೆಂಟ್ ಮನೋಭಾವವನ್ನು ನಿಜಕ್ಕೂ ಹೊಡೆದೆಬ್ಬಿಸಿತು. ನಮ್ಮ ಪುಟ್ಟ ಸಂಪಾದಕ ಮಂಡಲಿಯಲ್ಲಿ ಈ ಬಗ್ಗೆ ವಿಪುಲವಾಗಿ ಚರ್ಚಿಸಿದೆವು. ಅದರ ಫಲಶ್ರುತಿ ಇಗೋ ನಿಮ್ಮ ಕೈಲಿದೆ.

ಈ ಸಂಚಿಕೆಯಿಂದ ಮೊದಲುಗೊಂಡ ನುರಿತ ಬರಹಗಾರ/ಓದುಗರೊಬ್ಬರು, ತಮ್ಮ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯವೆನ್ನಬಹುದಾದ ಬರಹವೊಂದನ್ನು ಆರಿಸಿ, ತಮ್ಮ ಅಭಿಪ್ರಾಯಗಳೊಂದಿಗೆ ನಮ್ಮ ಓದುಗರಿಗೆ ನೀಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಕನ್ನಡ ಸಾಹಿತ್ಯಲೋಕದ ಖ್ಯಾತ ವಿದ್ವಾಂಸರುಗಳಾದ ಶ್ರೀಯುತ ಎಲ್.ಎಸ್. ಶೇಷಗಿರಿರಾಯರು, ಹಾಗೂ ಪ್ರೊಫೆಸರ್ ಎಚ್.ಕೆ. ರಾಮಚಂದ್ರಮೂರ್ತಿಯವರು ಮತ್ತು ನಮ್ಮ ಬಳಗದವರೇ ಆಗ ಶ್ರೀನಿವಾಸ ವೈದ್ಯ (ಶೀನು) ಇವರೆಲ್ಲ ಈ ನಿಟ್ಟಿನಲ್ಲಿ ನಮಗೆ ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಮೊದಲ ಆರು ಆಯ್ಕೆಗಳನ್ನು ಮಿತ್ರ ಶ್ರೀನಿವಾಸ ವೈದ್ಯರು ಮಾಡಿಕೊಡಲು ಒಪ್ಪಿದ್ದಾರೆ. ಅವರ ಆಯ್ಕೆಯ ಚೊಚ್ಚಲ ಲೇಖನ 'ದಗಡೂ ಪರಬನ ಅಶ್ವಮೇಧ' ಬರಹವನ್ನು ಅಪರಂಜಿಯಲ್ಲಿ ಬಳಸಲು ಅನುಮತಿ ಕೊಟ್ಟಿದ್ದಕ್ಕಾಗಿ ಲೇಖನದ ಕರ್ತೃ ಮಾನ್ಯ ಜಯಂತ ಕಾಯ್ಕಿಣಿಯವರಿಗೆ ನಮ್ಮ ಕೃತಜ್ಞತೆಗಳು. ಈ ಲೇಖನಮಾಲೆ ನಮ್ಮ ವಾಚಕರಿಗೆ ನಿಜಕ್ಕೂ ಮುದ ತರಲೆಂಬುದು ನಮ್ಮ ಆಶಯ.

ಶೃಂಗೇರಿ ಸತೀಶರ ವ್ಯಂಗ್ಯ ಚಿತ್ರಗಳು ಚೆನ್ನಾಗಿ ಮೂಡಿ ಬಂದಿವೆಯೆಂದು ಅನೇಕ ಓದುಗರು ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಈ ಉದಯೋನ್ಮುಖ ಚಿತ್ರಕಾರ, ಅಪರಂಜಿಗೆ ಇನ್ನೂ ಇತರ ವ್ಯಂಗ್ಯಚಿತ್ರಕಾರರನ್ನು ಪರಿಚಯಿಸುವ ಭರವಸೆ ನೀಡಿದ್ದಾರೆ. ಅಪರಂಜಿಯನ್ನು ಆದಷ್ಟು ಚಿತ್ರಭರಿತವನ್ನಾಗಿಸುವ ಆಶೆ ನಮ್ಮದು.

ಪ್ರಬುದ್ಧ ಹಾಸ್ಯಸಾಹಿತ್ಯವನ್ನು ಓದುಗರಿಗೆ ನೀಡುವ ಈ ಯತ್ನದಲ್ಲಿ ಎಲ್ಲ ಸಾಹಿತಿಗಳ ಸಹಾಯವನ್ನು ಅಪರಂಜಿ ಕೋರುತ್ತಾಳೆ. ಪ್ರಬಂಧ, ಹರಟೆ, ಸಣ್ಣಕಥೆ, ಅಣಕವಾಡು, ಹನಿಗವನ, ವಿವಿಧ ವೃತ್ತಿಗಳಲ್ಲಿ ನಗೆಮಿಂಚಿನ ಕ್ಷಣಗಳು, ಇವೆಲ್ಲಕ್ಕೂ ಅಪರಂಜಿಯಲ್ಲಿ ಮುಕ್ತ ಸ್ವಾಗತ. ನಗೆ ಸಾಹಿತ್ಯ, ಸಾಹಿತ್ಯದ ಒಂದು ಪ್ರತ್ಯೇಕ ಪ್ರಕಾರವಲ್ಲ. ಸಾಹಿತ್ಯದ ಮುಖ್ಯ ವಾಹಿನಿಯಲ್ಲಿ ತಾನಾಗಿಯೇ ಹೆಣೆದುಕೊಂಡು ಬರುವ ಹಾಸ್ಯ ನಿಜಕ್ಕೂ ಉತ್ತಮ ಸಾಹಿತ್ಯವೇ. ಇದು ಅಪರಂಜಿಯ ಮಿಷನ್ ಸ್ಟೇಟ್‌ಮೆಂಟ್ ಸಹಾ.

ನಮಸ್ಕಾರ

– ಶಿವಕುಮಾರ್

ಮಾಲಾಳ ಗಂಡ

- ಎಂ.ಸಿ. ಅಂಟಿನ

ಕಳೆದ ಶನಿವಾರ ಮಧ್ಯರಾತ್ರಿ, ಬಾಳೇಶಿ ಮನೆಯ ಟೆಲಿಫೋನ್ ಬಲವಾಗಿ ರಿಂಗ್ ಮಾಡಿತು. ಗಾಢ ನಿದ್ರೆಯಲ್ಲಿದ್ದ ಬಾಳೇಶಿಗೆ ಅದರ ಪರಿವೆಯೇ ಇರಲಿಲ್ಲ. ರಿಂಗ್ ಮಾತ್ರ ನಿದ್ದೆಗೆಡಿಸುವ ತನ್ನ ಕಾರ್ಯವನ್ನು ನಿಯತ್ತಿನಿಂದ ಮಾಡುತ್ತಿತ್ತು.

ಹೀಗೆಯೇ ಬಿಟ್ಟರೆ ಮನೆಯ ಎಲ್ಲರ ನಿದ್ದೆಯೂ ಹಾಳಾಗುವುದೆಂದು ಬಾಳೇಶಿಯ ಮಗ ಓಡಿ ಬಂದು ಫೋನನ್ನೆತ್ತಿದ.

''ನಿಮ್ಮಪ್ಪ ಇನ್ನೂ ಮಲಕೊಂಡಾನೇನು? ಇಷ್ಟು ರಿಂಗಾದರೂ ಎಚ್ಚರಾಗಿಲ್ಲೇನು? ಎಬ್ಬಿಸ ಅವನನ್ನ. ಅವನ ಕೂಡ ಅರ್ಜಂಟ ಸ್ವಲ್ಪ ಮಾತಾಡೂದದ'' ಆರ್ಡರ್ ಮಾಡಿತು ಆ ಕಡೆಯ ದನಿ.

ಅನಿವಾರ್ಯವಾಗಿ ಅಪ್ಪನನ್ನ ಎಬ್ಬಿಸಿದ ಬಾಳೇಶಿಯ ಮಗ.



''ಅಪ್ಪಾಜಿ, ನಿಮ್ಮ ಕೂಡ ಯಾರೋ ಅರ್ಜಂಟ ಮಾತಾಡಬೇಕಂತಾರ'' ಎಂದು ಬಾಳೇಶಿಯ ಕೈಯಲ್ಲಿ ರಿಸೀವರನ್ನಿಟ್ಟು ಮಗರಾಯ ಮಲಗಲು ತನ್ನ ರೂಮಿಗೆ ಓಡಿದ.

''ಏನಪಾ ರಾಯಾ, ಹೆಂಥಾ ನಿದ್ದೀ ನಿಂದು? ಎಷ್ಟೊತ್ತಿನ ತನಕ ರಿಂಗ್ ಆದರೂ ಯಾಕ ಏಳಲಿಲ್ಲ ನೀನು? ದನದ ಮಾಂಸಾ ಏನಾದರೂ ತಿಂದು ಮಲಗಿದ್ದೇನು?''

''ಅಲ್ಲೋ ದೆವ್ವಗಳಂಗ ಮಧ್ಯರಾತ್ರಿ ಫೋನ್ ಮಾಡಿದರ ಯಾರ ಏಳತಾರ! ಅಂಥಾ ಅರ್ಜಂಟೇನಾದರೂ ಇದ್ದರೆ, ನೀನು ಮೊದಲೇ ಯಾಕ ಫೋನ ಮಾಡಬಾರದಾಗಿತ್ತು?

''ಕೆಲಸದ ಒತ್ತಡದೊಳಗೆ ನಿನಗೆ ತಿಳಿಸಲಿಕ್ಕೆ ಮರತಿದ್ದೆ. ಈಗ ನೆನಪಾಯ್ತು.''

''ಇರಲಿ ಮಾರಾಯಾ, ನಿನ್ನ ಜೋಡಿ ಯಾರ ತಲಿ ಬಡಕೊಂಡಾರು? ಹೇಳು. ನಿನ್ನ ಅರ್ಜಂಟ ಕೆಲಸ ಯಾವುದದು?'' ಕೇಳಿದ ಬಾಳೇಶಿ.

''ನಾಳಲ್ಲ ನಾಡಿದ್ದು - ಸೋಮವಾರ - ನನ್ನ ಇಬ್ಬರೂ ಹೆಣ್ಣು ಮಕ್ಕಳ ಮದುವಿ ಅದ. 'ಶುಭಮಂಗಲಂ' ಕಾರ್ಯಾಲಯದೊಳಗ. ಸರಿಯಾಗಿ 12-35 ಗಂಟೆಗೆ ಅಕ್ಷತಾ ಅವ. ಮರೆಯದೇ ಬರಬೇಕು. ಒಬ್ಬನೇ ಬರಬೇಡ. ಇಬ್ಬರೂ ಶಿವ-ಪಾರ್ವತಿ ಹಂಗ ಜೋಡೀಲೆ ಬರ್ರಿ'' - ಅಂದೀತು ಆ ತುದಿಯ ವ್ಯಕ್ತಿ.

''ಆಗಲಿ. ನೀ ಯಾರು?'' ಬಾಳೇಶಿ ಕೇಳಿದ.

''ಯಾಕೋ ಗುರುತು ಸಿಗಲಿಲ್ಲೇನು?''

''ಹೌದು ಅದಕ್ಕಾಗಿಯೇ ಕೇಳೂದಪಾ ಬಹಾದ್ದೂರಾ, ನೀ ಯಾರಂತ.''

''ನಾನು ನಂದಗಡದ ಅಳಿಯ ಗೊತ್ತಾತು?'' ಕೇಳಿತು ಆ ದನಿ.

''ಇಲ್ಲ. ನನಗ ಗೊತ್ತಿದ್ದ ನಂದಗಡದ ಅಳಿಯಂದಿರು ನೂರು ಮಂದಿ ಅದಾರ. ಅವರೊಳಗೆ ನೀ ಯಾರು?'' ಕೇಳಿದ ಬಾಳೇಶಿ.

''ಮರಾಠರು, ಬ್ರಾಹ್ಮಣರು, ಕ್ರಿಶ್ಚಿಯನ್‌ರು, ಬ್ಯಾಡರು, ಹರಿಜನರು - ಎಲ್ಲಾರ್ನೂ ಸೇರಿಸಿ ನೀನು ಹೇಳತೀಯೇನು? ನಮ್ಮ ಪೈಕಿನೂ ನಂದಗಡದೊಳಗ ಜನರು ಅದಾರಂಬೂದನ್ನ ನೀನು ಮರಿಬ್ಯಾಡ.''

''ಹೌದೇನ? ನಮ್ಮ ಪೈಕಿ ಜನರೊಳಗ ಹತ್ತು ಮಂದಿ ನಂದಗಡದ ಅಳಿಯಂದಿರು ನನಗೆ ಪರಿಚಯದವರದಾರ.''

''ಇದ್ದಿದ್ದಾರು. ಆದರ, ಮೂಲಿಮನಿ ಗಂಗಾಧರನ ಅಳಿಯಂದಿರ ಪರಿಚಯ ಇಲ್ಲೇನ ನಿನಗ?''

''ಯಾಕಿಲ್ಲ? ಆದರ ಗಂಗಾಧರಗ ಮೂರು ಮಂದಿ ಅಳಿಯಂದಿರು. ಅವರೊಳಗ ನೀ ಯಾವ ಅಳಿಯ?''

''ನಾನು - ಮದುವೆಯಾಗಲಿರುವ ಹುಡುಗಿಯರಾದ ಪ್ರೀತಿ-ಮತ್ತು ಗೀತಾರ ಅಪ್ಪ''

''ಪ್ರೀತಿ - ಗೀತಾ ಹುಡುಗಿಯರ ಮೂಗು ಅವರ ತಾಯಿಯ ಮೂಗಿನಂಗ ಪಸಂದ ಉದ್ದ ಅದಾನ.''

''ಹೂಂನೋ ಮಾರಾಯಾ; ಆ ಉದ್ದ ಮೂಗಿನ ಮಾಲಾಳ ಗಂಡನೇ ನಾನು!''

''ಅಲಾ ಬಾಬ್ಯಾ ಮಗನೆ, ನಿನ್ನ ಹೆಸರೇನಂತ ಕೇಳಿದರ, ಮಾಲಾನ ಗಂಡಂತ ಹೇಳತಿಯಲ್ಲಲೆ ಮ್ಯಾಗೇಡಿ! ಈ ಗತಿ ಯಾಕ ಬಂತೋ ನಿನಗ?'' ಕೇಳಿದ ಬಾಳೇಶಿ.

''ಭಾಬೂರಾವ್, ಮಕ್ಕಳ ಮದುವಿ ಮಾಡಾಕ ಹತ್ತೇದಿ, ಚಲೋ ಆಯ್ತು - ಅಂತ ಬಾಯ್ತುಂಬ ಮೆಚ್ಚಿ ಮತಾಡ್ತಿಯಂತೆ ತಿಳಕೊಂಡಿದ್ದೆ'' ಎಂದ ಬಾಬೂರಾವ್ ''ಇರಲಿ ಸೋಮವಾರ ಮಧ್ಯಾಹ್ನ 12-35 ಶುಭಮಂಗಲಂ ಕಾರ್ಯಾಲಯಕ್ಕೆ ವೈನಿಯವರನ್ನ ಕರಕೊಂಡು ಬರಲಿಕ್ಕೆ ಮರಿಬ್ಯಾಡ'' - ಎಂದು ನೆನಪಿಸುತ್ತ ಮಾತು ಮುಗಿಸಿದ.

★★★

ಆಳ

ಕತೆಗಿಂತಲೂ
ಕವಿತೆಗೆ
ಆಳ ಜಾಸ್ತಿ
ಕಾರಣ
ಕವಿತೆಯ
ಮಧ್ಯವಿದೆ
ಒಂದು 'ವಿ'

– ಗೋಪಾಲಿ

''ಬೇಕಾದರೇ....''

- ಲೈಲಾ

ಈ 'ಬೇಕಾದರೇ....' ಅನ್ನೋದು ನನ್ನ ಹೆಂಡತಿಯ ಬಾಯಿಂದ ಆಗಾಗ್ಗೆ ಉದುರುವ ಆಣಿ ಮುತ್ತುಗಳು. ಇದನ್ನು ನನ್ನ ಮೇಲೆ ಅವಳು ಪ್ರಯೋಗಿಸುವ 'ಗೂಗ್ಲಿ' ಅಂತಾನೂ ಹೇಳಬಹುದು. ಒಂದೊಂದು ಸಲ ''ನಿಮಗೆ ಬೇಕಾದರೆ...'' ಅಂತಾನೂ ಹೇಳ್ತಾಳೆ. ನಿಮಗೇಂತ ನನಗೆ ಹೇಳಿದರೂ, ಅದು ಅವಳಿಗೆ ಬೇಕಾದ್ದೇ ಆಗಿರುವುದು ನನಗೆ ಸ್ಪಷ್ಟವಾಗಿ ಗೊತ್ತು. ಈ ''ಗೂಗ್ಲೀ''ನ ಅವಳು ಆಗಾಗ ಬಿಡ್ತಾನೇ ಇರ್ತಾಳೆ. ಪಿಚ್‌ನ ಪರಿಸ್ಥಿತಿ, ಹವಾಮಾನ ವ್ಯತ್ಯಾಸದ ಪರಿಣಾಮವಾಗಿ ಚೆಂಡು ತಿರುಗುವ ವೇಗ, ಪುಟಿಯುವ ಎತ್ತರ ಬದಲಾಗುವ ಹಾಗೆ, ಅವಳ ಈ ''ಬೇಕಾದರೇ...''ಗೂ ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ನಿಗೂಢ ಅರ್ಥಗಳಿರುತ್ತೆ ಅನ್ನೋದು ನನ್ನ ಮೂವತ್ತೈದು ವರ್ಷಗಳ ಅನುಭವ.

ಕೆಲವು ಸ್ಯಾಂಪಲ್ಲುಗಳು ಇಲ್ಲಿವೆ ನೋಡಿ. ಯುಗಾದಿಗೆ ಕೆಲವು ದಿನಗಳ ಮುಂಚೆ, ಒಂದು ಸಂಜೆ 'ರೀ! ನಿಮಗೆ ಏನಾದ್ರೂ ಕೆಲಸ ಇದೆಯಾ?' ಅವಳ ಈ ಮೆಲ್ಲುಸಿರ ಸವಿಗಾನಕ್ಕೆ ನನ್ನ ಮನ ಸೋಲದೆ, ''ಇನ್ನೆಲ್ಲೀ ಕೆಲಸವೇ? ರಿಟೈರಾಗಿ ಎರಡು ವರ್ಷ ಆಯ್ತು'' ಎಂದು ಚುಡಾಯಿಸಿದೆ.

''ತಮಾಷೆ ಮಾಡಬೇಡ್ರೀ. ಎಲ್ಲಾದ್ರೂ ಲೆಕ್ಚರ್ರೂ, ಮೀಟಿಂಗೂ ಇದೆಯಾ ಅಂತ ವಿಚಾರಿಸಿದೆ ಅಷ್ಟೆ.''

''ಯಾಕೇ? ಈವತ್ತೇನೂ ಇಲ್ಲ. ಏನಾಗ್ಬೇಕಿತ್ತು ರಾಣೀ ಸಾಹೇಬರಿಗೆ''

''ಸ್ವಲ್ಪ ಗಾಂಧಿ ಬಜಾರಿಗೆ ಹೋಗಿ ಬರೋಣಾಂತ''

''ವಿದ್ಯಾರ್ಥಿ ಭವನ್‌ಗೋ? ರೋಟಿಘರ್‌ಗೋ?''

''ಅಲ್ಲೆಲ್ಲಾ ಏನೂ ಬೇಡಾ, ಸುಮ್ನೇ ಹಾಗೇ ಸುತ್ತಾಡಿಕೊಂಡು ಬರೋದು. 'ಬೇಕಾದ್ರೇ...' ನಿಮಗೆ ಒಂಟು ಟೀಷರ್ಟ್ ತರೋದು. ಇನ್ನೇನು ನಿಮ್ಮ ಬರ್ತಡೇ ಬರುತ್ತಲ್ಲಾ''

''ಹಾಗ್ಹೇಳು ಮತ್ತೆ. ಸುಮ್ನೇ ಅಂದ್ರೇ ರಾಗ ನನಗೆ ಗೊತ್ತಿಲ್ವೇ? ನನ್ನ ಬರ್ತ್‌ಡೇ ಹಾಗಿರಲಿ, ಅಮ್ಮಾವ್ರಿಗೇ ಸೀರೆ ಬೇಕಾಗಿದೆ ಹಬ್ಬಕ್ಕೆ ಅಲ್ವಾ? ಎಲ್ಲೋ ಯಾವುದೋ ಅಂಗಡೀಲಿ ಒಂದು ಸೀರೆ ತೊಗೊಂಡ್ರೇ, ಒಂದು ಟೀ-ಷರ್ಟ್ ಫ್ರೀ ಅಂತ ಹಾಕಿರ್ಬೇಕು ಅಲ್ವಾ?''



''ಸದ್ಯ ಹಾಗೇನೂ ಇಲ್ಲ. ಇನ್ನೂ ಯಾರಿಗೂ ಈ ಐಡಿಯಾ ಹೊಳೆದಿಲ್ಲಾ. ಇನ್ಮೇಲೆ ಅದೂ ಷುರು ಮಾಡಬಹುದು. ನಿಮ್ಮ ಜೋಕು ಹೇಳಿದರೇ'' ಎಂದು ಕೊಂಕಿಸಿ ನನ್ನ ಜೋಕನ್ನು ಮೆಚ್ಚುವ ಔಚಾರ್ಯ ತೋರಿದಳು. ಹೀಗೆ ನನಗೆ ಅವಳ 'ಬೇಕಾದ್ರೇ...'ಯ ಗೂಢಾರ್ಥ ತಿಳಿದ್ಹೋಯ್ತು.

★★★

ಇನ್ನೊಂದು ಸಂಜೆ. ಮದುವೆಯ ಆರತಕ್ಷತೆಗೆ ಹೊರಡುವ ಸಡಗರದ ತಯಾರಿ ನಡೆದಿತ್ತು. ಮೇಕಪ್ ಎಲ್ಲಾ ಪರಿಪೂರ್ಣವಾಗಿ ಮುಗಿದು ರಾಣೀ ಸಾಹೇಬರು ಸವಾರಿಗೆ ಹೊರಡುವ ಸೂಚನೆಗಳೂ ಬಂದುವು. ಮನೆಗೆ ಬೀಗ ಹಾಕುವ ಮುಂಚೆ, ನನ್ನ ಕೈಗೆ ಒಂದು ಸೀಲಾದ ಉಡುಗೊರೆಯ ಕವರನ್ನು ಕೊಡುತ್ತಾ ''ಬೇಕಾದ್ರೇ... ಏನಾದ್ರೂ ಬರೆದು ಕೊಡ್ರೀ'' ಎಂದು ಮಧುರ ವಾಣಿಯಲ್ಲಿ ಉಲಿದಳು. ಈ ಮಧುರವಾಣಿಯ ಹಿಂದೆ ''ಈ ಕವರಿನೊಳಗೆ ನಾನು ಹಾಕಿರೋದು ಸಾಕು. ನಾವು ಈ ತಿಂಗಳು ಇನ್ನೂ ಐದಾರು ಮದುವೆ, ಮುಂಜಿ,

ಗೃಹಪ್ರವೇಶ, ನಾಮಕರಣ ಮುಂತಾದ ಸಮಾರಂಭಗಳಿಗೆ ಹೋಗಬೇಕು. ಎಲ್ಲಾದಕ್ಕೂ ನಿಮ್ಮ ಜುಜುಬೀ ಪೆನ್ಷನ್ನಲ್ಲೇ ಅಡ್ಜಸ್ಟ್ ಮಾಡಬೇಕು. ಆದ್ರಿಂದ, ನೀವು ನಿಮ್ಮ ದೊಡ್ಡಸ್ತಿಕೆ ತೋರಿಸೋ ಧಾರಾಳತನ ಮಾಡೋಕೆ ಹೋಗಬೇಡಿ ಅನ್ನೋ ಎಚ್ಚರಿಕೆ ಜೊತೆ ಕವರಿನ ಮೇಲೆ ನಿಮ್ಮ ಹಾಗೆ ಕಾವ್ಯ, ಕವನ, ಬರೆಯೋಕೆ ನನಗೆ ಬರೋಲ್ಲ. ನಿಮ್ಗೇನು ಬೇಕೋ ಅದು ಬರ್ಕೊಳೀ ಅಷ್ಟೇ'' ಎಂಬ ಅಧಿಕಾರವಾಣಿಯ ಗತ್ತಿನ ದನಿಯೂ ನನಗೆ ಅರ್ಥವಾಯಿತು.

★★★

ಅವರೇಕಾಯಿ ಸೀಸನ್ನು ಸಂಜೆ ತರಕಾರಿ ಮಾರ್ಕೆಟ್ನಲ್ಲಿ ''ಕೆ.ಜಿ. ಹತ್ತು ರೂಪಾಯಿ ಸೊಗಡವರೇಕಾಯಿ. ಆಗೋಯ್ತಾಯ್ತು'' ಅಂತಾ ಕೂಗು ಕೇಳಿ ಬರ್ತಾ ಇದ್ದವು. ಇವಳು ನನ್ನ ಕಡೆ ನೋಡಿ! ಬೇಕಾದ್ರೇ ತೊಗೊಳ್ಳ್ರೀ....'' ಎಂದು ಪಲ್ಲವಿ ಹಾಡಿದಳು.

''ಒಂದು ಕೆ.ಜಿ. ಸಾಕಾ?''

''ಬೇಕಾದ್ರೇ ಇನ್ನೊಂದು ಕೆ.ಜಿ. ತಗೊಳ್ಳಿ'' ಮತ್ತೆ ಅದೇ ರಾಗ, ಅದೇ ಹಾಡು. ಇದರ ಅರ್ಥ ''ಸುಲಿಯೋರು ನೀವುತಾನೇ? ನನ್ನ ಕೈಲಂತೂ ಆಗೋಲ್ಲ. ಆ ಹುಳ ಕಂಡ್ರೇ ನನಗೆ ಹುಲಿ ಕಂಡಷ್ಟು ಭಯ. ನೀವು ಸುಲಿದುಕೊಟ್ರೇ, ಎಳೇಕಾಳು ಹಾಕಿ ಉಪ್ಪಿಟ್ಟು, ಮಿಕ್ಕಿದ ಕಾಳು ಹಾಕಿ ಸಾರು ಮಾಡ್ಬೋದು'' ಎಂಬ ಇಂಗಿತ ನನಗೆ ತಿಳಿಯೋಲ್ವೇ? ಆದರೆ ತರಕಾರಿಯವನು ಸುಮ್ಮನೇ ಬಿಡ್ತಾನ್ಯೇ? ''ಕಾಯಿ ಚೆನ್ನಾಗಿದೆ. ಇನ್ನೂ ಎರಡು ಕೆ.ಜಿ. ಹಾಕಿಸ್ಕೊಳ್ಳೀ ಸ್ವಾಮಿ. ಅಂತಾ ಇನ್ನೊಂದು ತೂಕ ಹಾಕೋಕೆ ಸಿದ್ಧನಾದ. ನಾನು ಇವಳ ಕಡೆ ನೋಡಿದೆ. ಅವಳಿಗೂ ನನ್ನ ಇಂಗಿತ ಗೊತ್ತಾಗಿ. ''ಬೇಕಾದ್ರೇ... ಇನ್ನೊಂದು ಕೆ.ಜಿ. ತಗೊಳ್ಳೀ'' ಎಂಬ ಅನುಪಲ್ಲವಿ ಹಾಡಿದಳು. ಇದರ ಅರ್ಥ ''ಕಾಯಿ ಸುಲಿಯೋರೂ ನೀವೇ, ಕಾಳು ಹಿದಕೋರೂ ನೀವಲ್ಲವೇ? ನೀವಲ್ಲವೇ'' ಅಂತಾ ಹೇಳಿದ್ದೂಂತ ಗೊತ್ತಾಗದೇ ಇರುತ್ಯೇ, ಹೇಳಿ.

★★★

ಮತ್ತೊಂದು ದಿನ ಬೆಳಿಗ್ಗೆ ಹತ್ತು ಗಂಟೆ ಸಮಯ. ಅಡಿಗೆ ಮನೆಯ ಒಳಗೆ ಇಣುಕಿ ನೋಡಿದೆ. ನನ್ನನ್ನು ಕಂಡು. ''ಓ! ಬಂದ್ರಾ, ಇನ್ನೂ ಪೂಜೆ ಮುಗಿದಿಲ್ವೇನೋ ಅಂದ್ಕೊಂಡಿದ್ದೆ. ''ಬೇಕಾದ್ರೇ, ಸ್ವಲ್ಪ ಅವಲಕ್ಕಿ ಒಗ್ಗರಣೆಗೆ

ಹಾಕಿದ್ದು ಇದೆ ತಿಂತೀರಾ? ಆಮೇಲೆ ಬೇಕಾದ್ರೇ ಸ್ವಲ್ಪ ಕಾಫೀನೋ, ಟೀನೋ ಬೆರೆಸ್ಕೊಳ್ಳಿ. ಹೋಗಲಿ, ಬೇಡಾಂದ್ರೇ, ಸ್ವಲ್ಪ ನಿಂಬೆಹಣ್ಣು ಜ್ಯೂಸ್ ಮಾಡ್ತೀರಾ?'' ಎಂದು ಎರಡು ಮೂರು ಛಾಯ್ಸು ಕೊಟ್ಟಿದ್ದು ಯಾಕೆ ಗೊತ್ತೇ? ''ಈವತ್ತು ನನಗೆ ಬೇರೆ ಕೆಲಸ ಇದೆ. ಅಡಿಗೆ ಲೇಟಾಗುತ್ತೆ. ಕುಕ್ಕರು ಕೂಗಿಸಿದೀನೀ. ನೀವೇ ಸ್ವಲ್ಪ ಸಹಾಯ ಮಾಡಿದ್ರೂ ಪರವಾಗಿಲ್ಲ. ನಿಂಬೇ ಹಣ್ಣು ಜ್ಯೂಸ್ ಮಾಡಿ, ನನಗೂ ಒಂದು ಲೋಟ ಕೊಟ್ರೆ, ನಿಮ್ಮ ಸಮಾನರುಂಟೇ?'' ಎಂದು ನನ್ನನ್ನು ತಾಜಾ ಮಾಡುವ ವೈಖರಿ, ಮೂವತ್ತು ವರ್ಷದ ಮೇಲಾದ್ರೂ ಗೊತ್ತಾಗದೇ ಇದ್ರೆ ಹೇಗೆ?

★★★

ಇನ್ನೊಂದು ಮಧ್ಯಾನ್ಹ ಹನ್ನೆರಡೂವರೆ ಘಂಟೆ ಸಮಯ. ಟೀವೀಲಿ ಮಹಿಳಾ ಕಾರ್ಯಕ್ರಮ ಬರ್ತಾ ಇತ್ತು. ಇವಳು ನನ್ನ ಕಡೆ ತಿರುಗಿ ''ರೀ!, ಒಂದು ಘಂಟೇ ಆಗ್ತಾ ಬಂತು. ನಿಮಗೆ ಹಸಿವಾಗ್ತಾ ಇಲ್ವಾ? ತಟ್ಟೇ ಹಾಕಿ, ನೀರು ಇಟ್ಟು ಸ್ವಲ್ಪ ರೆಡಿ ಮಾಡಿಬಿಟ್ರೆ, ಹಾಗೇ ಬೇಕಾದ್ರೇ... ಸ್ವಲ್ಪ ಹಪ್ಪಳ ಕರಿದುಬಿಟ್ರೇ, ನಾನು ಹತ್ತು ನಿಮಿಷದಲ್ಲಿ ಬಂದುಬಿಡ್ತೀನಿ'' ಎಂದು ನನ್ನ ಸಹಕಾರ ಕೋರಿದಾಗ, ''ಈ ಬೇಕಾದ್ರೇ... ಹಪ್ಪಳ ಕರಿದುಬಿಟ್ರೇ'' ಅನ್ನೋ ಔದಾರ್ಯ ಯಾಕೆ ಗೊತ್ತಾ?

''ಈವತ್ತು ಬರೀ ಅನ್ನ ಸಾರು ಅಷ್ಟೇ ಮಾಡಿರೋದು, ಊಟಕ್ಕೆ ಕೂತ ಮೇಲೆ ಉಪ್ಪಿನಕಾಯಿ ಇಲ್ವೇ? ಚಟ್ನಿ ಮಾಡಲಿಲ್ವಾ? ಹಪ್ಪಳ ಕರೀಲಿಲ್ವಾ? ಚಿಪ್ಸ್ ಮುಗಿದುಹೋಗಿದ್ಯಾ?'' ಇತ್ಯಾದಿ ಪ್ರಶ್ನೆಗಳನ್ನು ಕೇಳಬೇಡಿ. ಬೇಕಾದ್ರೆ ಹಪ್ಪಳ ನೀವೇ ಕರ್ಕೊಳ್ಳಿ. ನನ್ನ ಕೈಲಾಗೋಲ್ಲ. ಇಷ್ಟೂ ಮಾಡಿದ್ದಕ್ಕೇ ಸಾಕಾಯ್ತು ನನಗೆ'' ಅಂತಾ ಹೇಳೋದ್ರ ಬದ್ಲು ಸೂಚ್ಯವಾಗಿ, ಈ ಡಿಪ್ಲೊಮಸಿನ ತೋರಿಸುವ ಚಾಣಾಕ್ಷತನ ನನಗೆ ಚೆನ್ನಾಗಿ ಗೊತ್ತಾಗಿದೆ.

★★★

ಇನ್ನೊಂದು ಸಂಜೆ ಐದೂವರೆ ಘಂಟೆ ಸಮಯ

''ರೀ! ಕ್ರಿಕೆಟ್ ಮ್ಯಾಚು ಮುಗೀತೋ. ಇನ್ನೂ ಇದೆಯೋ?''

''ಇನ್ನು ಮೂರು ಓವರ್ರು ಅಷ್ಟೇ''

''ಆಮೇಲೆ ಎಷ್ಟೊತ್ತಿಗೇ ಶುರುವಾಗೋದು''

''ಇಲ್ಲಾ ಈವತ್ತಿಗೆ ಮುಗೀತು. ಇದು ಡೇ ಅಂಡ್ ನೈಟ್ ಮ್ಯಾಚ್ ಅಲ್ಲಾ''

''ಸದ್ಯ, ಬದುಕಿದೆ. ಹಾಗಾದ್ರೆ ಸ್ವಲ್ಪ ಫಿಫ್ತ್ ಕಡೇ ಹೋಗಿ ಬರೋಣವಾ?'' ಎಂಬ ಅನುರಾಗದ ಆಲಾಪ ಕೇಳಿ ಬಂತು.

''ಯಾಕೆ? ಏನು ಸಮಾಚಾರ?''

''ಏನೂ ಇಲ್ಲ. ಅಲ್ಲಿ ಪಾರ್ಕ್ ತುಂಬಾ ಚೆನ್ನಾಗಿದೆಯಂತೆ ಹಾಗೇ ಸುತ್ತಾಡಿಕೊಂಡು, ಬರ್ತಾ, ಬೇಕಾದ್ರೇ.... ನಿಮಗೆ ಹಸಿವಾಗಿದ್ರೇ, ಅಡಿಗಾಸ್‌ನಲ್ಲಿ ಏನಾದ್ರು ತಿಂದ್ಕೊಂಡು ಬರ್‍ಬೋದು ಅಲ್ವಾ?''

''ಬೇಕಾಗಿದ್ರೇ... ನಿಮಗೆ ಹಸಿವಾಗಿದ್ರೇ''

ಇದೆಯಲ್ಲಾ, ಇದರ ಗೂಢಾರ್ಥ.

''ನಾನು ಈವತ್ತು ಏನೂ ತಿಂಡೀ ಮಾಡಿಲ್ಲ. ನನಗೆ ಹಸಿವಾಗಿದೆ. ನಂಗೂ ದಿನಾಗಲೂ ಏನಾದ್ರೂ ತಿಂಡೀ ಮಾಡೋಕೆ ಹೊಂಚೋದು ಸಾಕಾಗಿದೆ. ಸ್ವಲ್ಪ ಚೇಂಜ್ ಇರ್‍ಲಿ. ಬನ್ನಿ ಹೋಗೋಣ'' ಎಂಬ ಆಹ್ವಾನದ ಕರೆಗೆ ಮನ್ನಣೆ ಮಾಡದೆ ಇರೋಕೆ ಆಗುತ್ಯೇ...? ಸಂಸಾರ ಸಮೇತ ಮರವಣಿಗೆ ಕಾರಲ್ಲಿ.

ಸರಿ, ಅಡಿಗಾಸ್‌ನಲ್ಲಿ, ರವೇ ಇಡ್ಲಿ, ಸೆಟ್ ದೋಸೆ, ಪೂರಿ ಪಲ್ಯ, ಮಸಾಲೆದೋಸೆ ಇತ್ಯಾದಿ, ಅವರವರಿಗೆ ಬೇಕಾದ್ದು ತಿಂದು ಆದ ಮೇಲೆ ''ನಿಮ್ಗೆ ಬೇಕಾದ್ರೇ... ಇನ್ನೇನಾದ್ರೂ ತೊಗೊಳ್ಳೀ'' ''ನಿಂಗೂ ಅಷ್ಟೇ ಎಂದು ಮಕ್ಕಳಿಗೂ ಸೇರಿಸಿ ಮತ್ತೆ ಅದೇ ರಾಗಾಲಾಪನೆ. ಇದರ ಅರ್ಥವೂ ಅಷ್ಟೇ.

ಮನೇಗೇ ಹೋದ ಮೇಲೆ. ಅಡಿಗೆ ಮಾಡೋಕೆ ನನ್ನ ಕೈಲಾಗೋಲ್ಲ, ಇರೋದನ್ನೇ ಅಡ್ಜಸ್ಟ್ ಮಾಡ್ಕೊಂಡ್ರೆ ಸರಿ. ಸಾಲದು ಅನ್ನೋರೂ ಇನ್ನೂ ಏನು ಬೇಕಾದ್ರೂ ಈಗ್ಲೇ ತಿಂದುಬಿಡಿ'' ಅಂತಾ ವಾರ್ನಿಂಗ್ ಕೊಡುವ ಶೈಲಿ.

ಸಂಸಾರ ರಥ ಚಕ್ರ ಸರಿಯಾಗಿ ತಕರಾರಿಲ್ಲದೇ ಉರುಳಬೇಕಾದ್ರೇ. ಗೃಹಮಂತ್ರಿಗಳ ಈ ಬೇರೆ ಬೇರೆ ತರಹದ ಬೇಕಾದ್ರೇಗಳನ್ನು ಸರಿಯಾದ ಅರ್ಥ ಮಾಡಿಕೊಳ್ಳೇಬೇಕಲ್ವೇ?

ಹೀಗೇ ಹೇಳ್ತಾ ಹೋದ್ರೇ, ಇನ್ನೂ ಈ ಬೇಕಾದ್ರೇ ಕಥೆಗಳು ಬಹಳಾ ಇದೆ. ಹಾ! ನಿಮ್ಮನೇದೂ ಇದೇ ಕಥೇನಾ...?

★★★

ಟ್ಯೂಬ್‌ಲೈಟ್ ಮಹಾತ್ಮೆ

- ಶೋಭಾ ಪ್ರಮೋದ್

ನನಗೆ ಬಾಲ್ಯದಿಂದಲೂ, ಟ್ಯೂಬ್‌ಲೈಟುಗಳ ಮೇಲೆ ಅಪರಿಮಿತ ಪ್ರೀತಿ. ಲೈಟಿನಂತೆ ಕೆಂಪಾಗಿ ಹೊಳೆಯದೆ ''ಕ್ಲೋಸ್ ಅಪ್'' ನಗೆಯಂತೆ ಬೆಳ್ಳಂಬೆಳ್ಳಗೇ ಪ್ರಕಾಶಿಸುತ್ತದೆ ಎಂದು!

ಕನ್ನಡ ಶಾಲೆಯಲ್ಲಿ, ಗಣಿತ ಮಾಸ್ತರರು ತಪ್ಪಾದಾಗ - ''ಏ, ಟ್ಯೂಬ್‌ಲೈಟ್ ಕೂಸೇ! ದೊಡ್ಡವಳಾದಾಗ ಟ್ಯೂಬ್‌ಲೈಟ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೋ'' ಎಂದು ಬಯ್ದರೂ, ನನ್ನನ್ನು ಟ್ಯೂಬ್‌ಲೈಟಿಗೆ ಹೋಲಿಸಿದ ಬಗ್ಗೆ ನನಗೇ ಹೆಮ್ಮೆಯಾಗುತ್ತಿತ್ತು! ನನ್ನನ್ನು ಮಂಕು, ಶತ ದಡ್ಡಳೆಂದು ಅವರು ಕರೆಯುತ್ತಾರೆಂದು ನನ್ನ ಟ್ಯೂಬ್‌ಲೈಟ್ ತಲೆಗೆ ಸುಳಿಯುತ್ತಿರಲಿಲ್ಲ!!

ವಿವಾಹವಾದಾಗ, ನಮ್ಮ ತಂದೆಯವರು ಪತಿರಾಯರಿಗೆ ಹೇಳಿದ್ದರು - ''ನನ್ನ ಮಗಳ ತಲೆ ಸ್ವಲ್ಪ ಟ್ಯೂಬ್‌ಲೈಟ್ ಇದೆ ಮಾರಾಯ್ರೇ! ಆದರೆ ಅಡುಗೆ ಚೆನ್ನಾಗಿ ಮಡ್ತಾಳೆ. ಇನ್ನೂರು ವೋಲ್ಟೇಜಿನಷ್ಟು ಬುದ್ಧಿವಂತ ಪ್ರಕಾಶ (ಕರಾದ!)ರಾದ, ತಾವು, ಸಂಭಾಳಿಸಿಕೊಳ್ಳಬೇಕು''!!

ಮರಾಠಿ ಭಾಷೆ ತಿಳಿಯದೆ, ಮೊದ ಮೊದಲು ಕಂಗಾಲಾಗಿ, ''ವಾಟಿ'', ''ಲೋಟಿ'' (ಚಿಕ್ಕ ಲೋಟ - ದೊಡ್ಡ ಲೋಟ) ಗಳ ವ್ಯತ್ಯಾಸ ತಿಳಿಯದೆ, ಒಂದು ತಾ. ಎಂದರೆ ಇನ್ನೊಂದನ್ನು ತರುತ್ತಿದ್ದಾಗ, ಅತ್ತೆಯವರು ''ನಿನ್ನ ಟ್ಯೂಬ್‌ಲೈಟ್ ಯಾವಾಗ ಹೊಳೆಯುತ್ತೋ ಕಾಣೆ''!! ಎಂದು ನಿಟ್ಟುಸಿರು ಬಿಟ್ಟಿದ್ದರು ಪಾಪ!!

ಟ್ಯೂಬ್‌ಲೈಟಿನ ಬಟನ್ ಒತ್ತಿದಾಗ, ಮೊದ-ಮೊದಲು ಫಕ್-ಫಕ್ ಎಂದು ಕೆಲಕಾಲ ಕಣ್ಣು ಮುಚ್ಚಾಲೆಯನ್ನಾಡಿ, ಬಳಿಕವೇ ಪ್ರಕಾಶಮಾನವಾಗಿ ಬೆಳಕನ್ನು ನೀಡುತ್ತದೆ. ಹಾಗೆಯೇ ಬ್ರಹ್ಮದೇವನು, ಮನುಷ್ಯ ಜಾತಿಯಲ್ಲಿ ಹಲವಾರು ಟ್ಯೂಬ್‌ಲೈಟ್ ಮಹಾಶಯರನ್ನು ನಿರ್ಮಿಸಿಬಿಟ್ಟಿದ್ದಾನೆ!! ಎಂತೆಂತಹ ಘನ ಘೋರ ಟ್ಯೂಬ್‌ಲೈಟ್ ಮಂದಿ, ಇಂದು, ಮುಖ್ಯಮಂತ್ರಿಯಾಗಿ ಅಧಿಕಾರ ಚಲಾಯಿಸುವುದನ್ನು ಕಂಡಿದ್ದೇವೆ. ನೂರಾರು ಹಗರಣಗಳನ್ನು ಮಾಡಿದ ಬಳಿಕ, ಮಂತ್ರಿ ಮಹೋದಯರ (ಅಪ) ಕೀರ್ತಿ ಪತಾಕೆಯು, ಪತ್ರಿಕೆಗಳಲ್ಲಿ ಹಾರಲಾರಂಭಿಸಿ, ಎಲ್ಲರೂ ಟೀಕಿಸುವಂತಾಗುತ್ತದೆ. ಆದರ ಏನೂ ಆಗದವರಂತೆ, ಮೂವತ್ತೆರಡು ಹಲ್ಲುಗಳನ್ನು ತೋರಿಸಿ, ''ನನ್ನ ಹಗರಣ ಸತ್ಯವೆಂದು ಸಿದ್ಧವಾಗುವ ತನಕ, ಮಂತ್ರಿ ಪದವಿಗೆ ರಾಜೀನಾಮೆ ನೀಡಲಾರೆ'' ಎಂದು ಹೇಳಿಕೆ ಕೊಡುವುದು



ಅವರ ಟ್ಯೂಬ್‌ಲೈಟ್ ತಲೆಯೇ ಅಲ್ಲವೇ?! ವ್ಯಂಗ್ಯ ಚಿತ್ರಕಾರರು, ವ್ಯಂಗ್ಯ ಚಿತ್ರವನ್ನು ಬರೆದರೂ, ಅದರ ಗೂಢಾರ್ಥವನ್ನರಿಯದೆ, ಸಂಬಂಧಪಟ್ಟ ವ್ಯಕ್ತಿಗಳೇ, ''ಶಹಾಭಾಸ್'' ಎಂದು ಹೊಗಳಿ, ತಮ್ಮ ಟ್ಯೂಬ್‌ಲೈಟ್ ಮೆದುಳನ್ನು ತೋರಿಸಿದ್ದನ್ನು ನಾನು ಕಂಡಿದ್ದೇನೆ. ಹಿಂದೀ ಸಿನೇಮಾ ನೋಡುವವರೊಬ್ಬರಿಗೆ ''ಈ ಫಿಲ್ಮ ಹೆಸರೇನು? ನಾಯಕ-ನಾಯಕಿ ಯಾರಿದ್ದಾರೆ?'' ''ಅದೆಲ್ಲ ಗೊತ್ತಿಲ್ಲಮ್ಮ. ಹೀಗೆಯೇ ಟೈಂ ಪಾಸಿಗೆಂದು ನೋಡುತ್ತಿದ್ದೇನೆ'' ಎಂದಾಗ, ಟ್ಯೂಬ್‌ಲೈಟಿನ ಆಳ, ವಿಸ್ತಾರದ ಅರಿವಾಗಿ, ತಲೆದೂಗಿದ್ದೇನೆ ಮಾರಾಯ್ರೇ!!

''ಬೆಳಗಾಂನಲ್ಲಿ ಸಮುದ್ರಕ್ಕೆ ಮಹಾಪೂರ ಬಂದು ಹಲವಾರು ಜನ ಮಡಿದರು'' ಎಂದಾಗಲೂ ''ಹೌದೇ!! ಯಾವಾಗ? ಅಯ್ಯೋ, ಪಾಪ! ಎಷ್ಟು ಜನ ಸತ್ತರು?!'' ಎಂದೆನ್ನುವ ಟ್ಯೂಬ್‌ಲೈಟ್ ಪಿತಾಮಹರು ನಮ್ಮಲ್ಲಿಲ್ಲವೇ ಸ್ವಾಮೀ?!

ನಾನೊಂದು ಕಾಲೇಜಿನ ಆಡಳಿತ ಮಂಡಳಿಯಲ್ಲಿದ್ದೇನೆ. ಪ್ರತೀ ವರ್ಷವೂ ಹೊಸ ಉಪನ್ಯಾಸಕರ ನೇಮಕಾತಿಗಾಗಿ ಇಂಟರ್‌ವ್ಯೂ ಮಾಡುತ್ತೇನೆ.

''ನ್ಯೂಟನ್ನನ ಚಲನೆಯ ನಿಯಮಗಳನ್ನು ಹೇಳಿರಿ'' ಎಂದರೆ ಪೈಥಾಗೋರಸನ ಪ್ರಮೇಯವನ್ನೇ, ಉಚ್ಚರಿಸುವ, ''ಕಾಳೀದಾಸನ ಕೃತಿಗಳನ್ನು ಹೆಸರಿಸಿರಿ'' ಎಂದರೆ ಬಾಣಭಟ್ಟನ ಕಾದಂಬರಿ ಹೆಸರನ್ನು ಹೇಳುವ, ''ಇತ್ತೀಚಿಗೆ

ಜ್ಞಾನಪೀಠ ಪ್ರಶಸ್ತಿ ವಿಜೇತರಾದವರ ಹೆಸರು ಹೇಳಿರೆಂದಾಗ'' ಶಿವಸೇನಾದ ಬಾಳ ಸಾಹೇಬ ಠಾಕರೆಯವರಿಗೇ, ಜ್ಞಾನಪೀಠ ಪ್ರಶಸ್ತಿಯನ್ನು ಕರುಣಿಸಿ, ಪಾವನರಾದ, ವಿಖ್ಯಾತ ಟ್ಯೂಬ್‌ಲೈಟ್ ಮಹನೀಯರನ್ನು ಕಂಡು ''ಧನ್ಯೋಸ್ಮಿ'' ಎಂದು ಉದ್ಗರಿಸಿದ್ದೇನೆ!

ನಾನು ಟ್ಯೂಬ್‌ಲೈಟ್ ಬುದ್ಧಿಯವಳೆಂದು, ಪ್ರಾಮಾಣಿಕವಾಗಿ ಒಪ್ಪಿಕೊಂಡು, ಲೇಖನವನ್ನು ಬರೆದು ಸಂಪಾದಕರಿಗೆ ಕಳುಹಿಸಿದ್ದೆ. ಅವರು ಆ ಲೇಖನವನ್ನು ಅಸ್ವೀಕೃತ ಮಾಡಿ, ಚಿಕ್ಕ ಪತ್ರ ಕೂಡ ಬರೆದಿದ್ದಾರೆ! ''ನೀವು ಈಗಾಗಲೇ ಹಲವಾರು ಕವನ, ಕಥೆ - ಲೇಖನ ಹಾಸ್ಯಗಳನ್ನು ಬರೆದುಬಿಟ್ಟಿರುವ ಕಾರಣ, ತಮ್ಮ ತಲೆ ಟ್ಯೂಬ್‌ಲೈಟ್ ತಲೆಯಲ್ಲವೆಂದು ನಿರ್ಧರಿಸಿಕೊಂಡು, ತಮ್ಮ ಲೇಖನವನ್ನು ಹಿಂತಿರುಗಿಸುತ್ತೇನೆ ಎಂದು ತಿಳಿಸಲು ವಿಷಾದ ಪಡುತ್ತಿದ್ದೇನೆ''!!

ಆ ಪತ್ರವನ್ನು ತಲೆಯ ಮೇಲಿಟ್ಟುಕೊಂಡು, ''ಯುರೇಕಾ'' ಎಂದು ಕುಣಿದಾಡಿಬಿಟ್ಟೆ! ಈ ವಿಶಾಲ ಜಗತ್ತಿನಲ್ಲಿ ಒಬ್ಬರಾದರೂ ಪುಣ್ಯವಂತರು ನಾನು ಟ್ಯೂಬ್‌ಲೈಟ್ ಅಲ್ಲವೆಂದು ನಿರ್ಧರಿಸಿದ್ದಾರಲ್ಲ!! ನೀವು ಏನಂತೀರಿ?! ನನ್ನನ್ನು ಟ್ಯೂಬ್‌ಲೈಟ್ ಎಂದು ಹೆಸರಿಸಿದರೂ ಬೇಸರವಿಲ್ಲ ಬಿಡಿ! ಕಾರಣ, ನನ್ನಂತಹ ಸಾವಿರಾರು ಟ್ಯೂಬ್‌ಲೈಟುಗಳಿಂದಲೇ ನಮ್ಮ ದೇಶ ಹೀಗೆ ಚಕ-ಚಕಕ್ಕೆಂದು ಬೆಳಗುತ್ತಿದೆ!!

ನವಂ (ಬರ)

ಹನ್ನೊಂದನೇ
ತಿಂಗಳಿನಲ್ಲಿ
ಉಲಿದರೆಲ್ಲಿದೆ
ಕನ್ನಡ ಸ್ವರ
ಉಳಿದನ್ನೊಂದು
ತಿಂಗಳು
ಕನ್ನಡಕ್ಕೆ
ವಿಪರೀತ ಬರ

– ಪಿ. ಅಶೋಕ್ ಡಿಸಾಲೆ

ತೃಪ್ತಿ

– ಹೆಚ್. ಗೋಪಾಲಕೃಷ್ಣ

('ಎದೆತುಂಬಿ ಹಾಡಿದೆನು' - ಪ್ರೊ.ಜಿ.ಎಸ್.ಎಸ್. ಕ್ಷಮೆ ಇರಲಿ)

ಕಿಸೆ ತುಂಬಿ ಆಡಿದೆನು ಅಂದು ನಾನು
ಪಣವಿಟ್ಟು ಎಲೆಯುದಿರಿಸಿದಿರಿ ಅಲ್ಲಿ ನೀವು
ಇಂದು ನಾ ಕೂತು ಆಡಿದರೂ ಅಂದಿನಂತೆಯೇ
ಎದುರು ಕೂತು ಎಲೆಹಿಡಿಯುವಿರಿ ಅದುವೆ ಸಮ್ಮೋಹನ
ಎಲೆ ಚದುರಿಸುವವಗೆ ಬೇಕೆ ಬೇರೆ ಬಿಗುಮಾನ?

ಎಲ್ಲಗೆಲಲೇ ಬೇಕೆಂದು ನಾ ಆಡುವುದಿಲ್ಲ
ಆಡುವುದು ಅನಿವಾರ್ಯ ಕರ್ಮ ನನಗೆ
ಜತೆಗಾಡುವವರಿಹರೆಂದು ನಾಬಲ್ಲೆನಾದರಿಂದ
ಆಡುವೆನು ಆಡುವೆನು ಕಿಸೆ ತುಂಬಲಿ ಎಂದಿನಂತೆ
ಯಾರೇ ಚಾಪೆ ಮುದುರಿದರೂ ಎನಗಿಲ್ಲ ಚಿಂತೆ

ಮೂಲ: (ಪ್ರೊ.ಜಿ.ಎಸ್.ಎಸ್. ಅವರ ಎದೆತುಂಬಿ ಹಾಡಿದೆನು)



ದಂತ ಕಥೆ

– ಬೇಲೂರು ರಾಮಮೂರ್ತಿ

''ಯಾಕೋ ಮೂರ್ದಿವ್ಸದಿಂದ ಹಲ್‌ನೋವ್ಪೂಂದ್ರೆ'' ಅಂತ ಇವಳು ರಾಗ ತೆಗೆಯೋಕೆ ಷುರು ಮಾಡಿ ಒಂದ್‌ವಾರ ಆಯ್ತು.... ಮನೆಗೆ ಹೋದ ತಕ್ಷಣ ಅಬ್ಬಬ್ಬಾ ಹಲ್ಲು... ಚುಳ್ ಅನ್ನುತ್ತೆ ಮೈ ಜುಂ ಅನ್ನುತ್ತೆ... ಒಂಥರಾ ನಡುಕ ಬರುತ್ತೆ ಏನೂ ಬೇಡಾನ್ಸುತ್ತೆ... ಹೀಗೆ ದಂತ ಕಥೆನ ಹೇಳ್ತನೇ ಹೋಗ್ತಾಳೆ. ಅವಳು ನಿಲ್ಲೋದೇ ಇಲ್ಲ.'' ಅಂತ ಸುಬ್‌ನಸಿಂಹ ಕಟ್ಟೇಲಿ ಒದಗಿದ. ಒಟ್ಟಿಗೇ ನಾಲ್ಕು ಲೊಚ್‌ಗಳಾದವು. ಒಂದು ಚಿಟಿಕೆ ನಶ್ಯ ಮೂಗಿಗೇರಿಸಿ ಎರಡೇ ಬೆರಳನ್ನು ಗಾಳಿಗೆ ಕೊಡವಿ ಮೂಗನ್ನು ರಪರಪಾಂತ ಒರೆಸಿಕೊಂಡು ಅದನ್ನೇ ಬರೀ ತೊಡೆಗೆ ಸವರಿಕೊಂಡು ಶಿಂಗ್ಲಾಚಾರಿ ಅಂದ. ''ಹೌದೋ ಸುಬ್ಬು. ಹಲ್‌ನೋವ್ ಬಂದ್ರೆ ಹೀಗೇ ಅನ್ನೋದು. ಯಾವ ನೋವು ಬೇಕಾದರೂ ತಡ್ಕೊಬಹುದು ಆದ್ರೆ ಹಲ್‌ನೋವು ತಡ್ಕೊಳೋಕಾಗಲ್ಲ'' ಅವತ್ತು ಕಟ್ಟೇಲಿ ಹಲ್‌ನೋವು ಬಂದ್ರೆ ಏನೇನು ಅನಾಹುತಗಳಾಗುತ್ತೆ ಅನ್ನೋದರ ಬಗ್ಗೆನೇ ಪುರಾಣ ಆಯ್ತು. ಹೌದು ಹಲ್ ನೋವು ಯಾಕೆ ಬರುತ್ತೆ. ಹಲ್ಲು ಇರುತ್ತೆ ಅದಿಕ್ಕೆ ನೋವು ಬರುತ್ತೆ. ಹಲ್ಲೇ ಇಲ್ಲದವರಿಗೆ ಅಥವಾ ಹಲ್ಲು ಕಟ್ಟಿಸಿಕೊಂಡೋರಿಗೆ ನೋವು ಎಲ್ಲಿಂದ ಬರುತ್ತೆ... ಹಲ್ ನೋವು ಬರದೇ ಇದ್ದರೆ ಪಾಪ ದಂತವೈದ್ಯರು ಏನು ಮಾಡಬೇಕು. ಒಂದಿವಸ ಶಿಂಗ್ಲಾಚಾರಿ ಮನೆ ರಸ್ತೇಲಿ ಇರೋ ದಂತವೈದ್ಯರು ಶಿಂಗ್ಲಾಚಾರಿನ ''ಏನ್ಸಮಾಚಾರ, ಹೇಗಿದೀರ. ನನ್ನ ಕ್ಲಿನಿಕ್ ಕಡೆ ನೀವು ಬರೋದೇ ಇಲ್ಲ ಅಂದ್ರಂತೆ ಶಿಂಗ್ಲಾಚಾರಿ ಗಾಭರಿಯಿಂದ ಬರ್ತೀನಿ ಅಂದ ನಾಲ್ಕು ಹೆಜ್ಜೆ ಇಟ್ಟಾಗ ಟ್ರೀಟ್‌ಮೆಂಟಿಗಲ್ಲಪ್ಪ ಸುಮ್ನೆ ಹಾಗೆ ಹರಟೆ ಹೊಡೆಯೋಕಾದ್ರೂ ಬನ್ನಿ ಅಂದ್ರಂತೆ. ನೋಡಿ ವೈದ್ಯರ ಹತ್ರ ಚೌರದೋರ ಹತ್ರ ಯಾರೂ ಕೆಲಸ ಇಲ್ದೆ ಹೋಗೋದೇ ಇಲ್ಲ. ಎಷ್ಟೇ ಫ್ರೀಯಾಗಿದ್ರೂ ಚೌರದೋನ ಅಂಗಡೀಗೆ ಹೋಗಿ ಮಾತಾಡ್ತಾ ಕೂತ್ಕೊಳೋಕೆ ಆಗುತ್ತೆ.... ಹಾಗೆ ಡಾಕ್ಟರ್ ಷಾಪಿಗೂ ಅಷ್ಟೆ ಕೆಲಸ ಇದ್ರೆ ಹೋದ ಇಲ್ದೆ ಇದ್ರೆ ಇಲ್ಲ. ಆದರೆ ಈ ದಂತ ವೈದ್ಯರು ಗಿರಾಕಿ ಇಲ್ದೆ ನೊಣ ಹೊಡೀತಾ ಇದ್ರಲ್ಲ ಅವರಿಗೆ ಸುಬ್ಬು ಹೆಂಡ್ತಿ ಕೇಸು ಹೇಳಬೇಕು ಅನ್ನಿಸ್ತು. ''ಡಾಕ್ಟ್ರೆ ನಮ್ಮ ಸುಬ್‌ನಸಿಂಹನ ಹೆಂಡ್ತಿ ಹಲ್ ನೋವು... ಚುಳ್ ಅನ್ನುತ್ತೆ ಅನ್ತಿದ್ದಾರಂತೆ ಸ್ವಲ್ಪ ಹೋಗಿ ನೋಡ್ತೀರಾ'' ಅಂದ ಶಿಂಗ್ಲಾಚಾರಿ. ಅಷ್ಟೇ ಸಾಕಾಯ್ತು ಡಾಕ್ಟ್ರಿಗೆ ಒಂದ್ ಗಿರಾಕಿಯಾದ್ರು ಸಿಕ್ತಲ್ಲ ಅಂತ ಹುಡುಗನಿಗೆ ಹುಷಾರು ಗಿರಾಕಿ ಬಂದ್ರೆ ಕೂರ್ಸು ಹೋಗೋಕೆ ಬಿಡಬೇಡ ಅಂದು ಅದ್ಯಾವ್ದೋ ಔಷಧಿ ಕೊಟ್ಟು ಅದನ್ನ ಬಾಯಿಗೆ

ಹಾಕಿ ಮುಕ್ಕಳಿಸ್ತಾ ಇರು ಡಾಕ್ಟರು ಬಂದ್‌ಬಿಡ್ತಾರೆ ಅಂತ ಹೇಳು ಅಂದು ಸುಬ್‌ನಸಿಂಹನ ಮನೆಗೆ ಓಡಿದರು.

ಸ್ನೇಹಿತನ ಉಪಕಾರವನ್ನು ಮನಸಾ ಸ್ಮರಿಸಿ ಸುಬ್‌ನಸಿಂಹ ಡಾಕ್ಟ್ರನ್ನ ಒಳಕ್ಕೆ ಕರ್‍ಕೊಂಡ... 'ಬನ್ನಿ ಡಾಕ್ಟ್ರೇ... ನೀವು ಬಂದದ್ದು ಸಂತೋಷ' ಅಂದು ಕೂರಿಸಿ ಒಳಗೆ ಬಂದು 'ಲೇ ಇವಳೇ ಡಾಕ್ಟ್ರು ಬಂದಿದಾರೆ ಬಾ ಹಲ್ಲು ತೋರಿಸು ಅದ್ಯಾವ ಹಲ್ಲು ನೋಯ್ತಿದೆ'' ಅಂದರು. ಒಂದ್ ವಾರದಿಂದ ಹಲ್ ನೋವು ಅಂತ ಒದ್ದಾಡ್ತಿದ್ದ ಸುಬ್ಬಮ್ಮ ''ಇದೇನೂಂದ್ರೆ ಹೇಳ್ದೆ ಕೇಳ್ದೆ ಡಾಕ್ಟರನ್ನ ಕರ್‍ಕೊಂಡ್ ಬಂದಿದೀರ ನಂಗೊಂದ್ ಮಾತು ಹೇಳಬಾರ್ದಿತ್ತೆ'' ಅಂದು ಬೇಗ ಬೇಗ ಕೋಲ್ಗೇಟ್ ಜೆಲ್ಲಲ್ಲಿ ಹಲ್ಲುಜ್ಜಿ ನಾಲಿಗೆ ತಿಕ್ಕಿ ಹಾ। ಹಾ। ಹಾ। ಅಂದು ಉಸಿರು ಬಿಟ್ಟು ತಲೆಗೂದಲು ಸರಿ ಮಾಡ್ಕೊಂಡು ಡಾಕ್ಟರ ಮುಂದೆ ಬಂದು ಕೂತರು.

ಡಾಕ್ಟರು ಸುಬ್ಬಮ್ಮನ ಕೈ ಹಿಡಿದರು ಎಲ್ಲಿ ಆ ಅನ್ನಿ ಅಂದರು ಯಾವ ಹಲ್ಲು ನಿಮಗೆ ತೊಂದರೆ ಕೊಡ್ತಿರೋದು ಅಂದು ಇಕ್ಕಳದಿಂದ ಒಂದೊಂದೇ ಹಲ್ಲು ಮುಟ್ಟಿದರು ಸುಬ್ಬಮ್ಮ ಬಾಯಿ ತೆರೆದೇ ಕೂತಿದ್ದರು. ಸುಬ್‌ನಸಿಂಹ ಆತಂಕದಿಂದ ನಿಂತಿದ್ರು ಏನೂಂದ್ರೆ ಡಾಕ್ಟರಿಗೊಂದು ಕಾಫಿ ತಂದ್‌ಕೊಡಬಾರ್ದೆ ಅಂದಾಗ ಸುಬ್‌ನಸಿಂಹ ತಲೆ ಕೆರ್‍ಕೊಂಡ್ ಒಳಗೆ ಹೋದರು.

''ಬಹುಶಃ ಎರಡು ಹಲ್ಲು ಕೀಳಿಸಬೇಕಾಗುತ್ತೆ'' ಅಂದರು ಡಾಕ್ಟರು.

''ಯಾವ ಎರಡು ಹಲ್ಲು ಡಾಕ್ಟರೇ''

''ಅದೇ ಬಾಲ್ಕನೀದೊಂದು ಕೆಳಗಿಂದೊಂದು''

''ಯಾಕೆ ಕೀಳಬೇಕು''

''ಅವೇ ನಿಮಗೆ ತೊಂದರೆ ಕೊಡ್ತಿರೋದು''

''ಡಾಕ್ಟ್ರೇ ನಿಮಗೆಲ್ಲೋ ತಲೆ ಕೆಟ್ಟಿದೆ ಅಸಲಿಗೆ ನನಗೆ ಹಲ್ಲು ನೋವೇ ಇಲ್ಲ''

''ಹಲ್ಲುನೋವೇ ಇಲ್ವೆ.. ಮತ್ತೆ ನಿಮ್ಮ ಪತಿ....''

''ಬರೀ ಕಿತಾಪತಿ... ಡಾಕ್ಟ್ರೆ ನಾನು ಹಲ್ ನೋವೂಂತ ನಾಟಕ ಆಡಿ ಅವರ ಕೈಲಿ ಅಡಿಗೆ ತಿಂಡಿ ಮಾಡಿಸ್ತಿದೀನಿ ಇನ್ನೊಂದ್ ವಾರನಾದ್ರೂ ನಂಗೆ ರೆಸ್ಟ್ ಬೇಕು''

ಡಾಕ್ಟರು ಹೌಹಾರಿದರು ಸುಬ್ಬಮ್ಮನ ಚಾಣಾಕ್ಷತನಕ್ಕೆ

''ಹೌದಮ್ಮ ನಿಮ್ಮ ನಾಟಕಕ್ಕೆ ನನ್ನನ್ನು ಯಾಕೆ ಸೇರಿಸಿಕೊಂಡ್ರಿ''

''ನಾವೆಲ್ಲಿ ಸೇರಿಸಿಕೊಂಡ್ವು... ನೀವೇ ಸೇರ್‍ಕೊಂಡ್ರಿ... ನಿಮ್ಮನ್ನ ಕರ್‍ಕೊಂಡ್ ಬನ್ನಿ ಅಂತ ನಾನು ಇವರಿಗೆ ಹೇಳೇ ಇರಲಿಲ್ಲ ಹೇಗೂ ಬಂದಿದೀರ ಇನ್ನೊಂದ್ ವಾರ ಇವರು ರೆಸ್ಟ್ ತಗೊಳ್ಳಿ ಅಂತ ಹೇಳಿ ಹೋಗಿ ಒಂದಿಪ್ಪತ್ ರೂಪಾಯಿ ಫೀಸ್ನ ಕೊಡ್ತೀನಿ'' ಅಂದರು ಸುಬ್ಬಮ್ಮ.

ಬಿಸಿ ಬಿಸಿ ಕಾಫಿ ತಂದ ಸುಬ್‌ನಸಿಂಹ "ನನ್ ಹೆಂಡ್ತಿ ಹಲ್‌ಗೆ ಏನಾಗಿದೆ ಡಾಕ್ಟ್ರೆ" ಅಂದು ಹಲ್ಕಿರಿದ.

ಏನೂ ಆಗಿಲ್ಲ ಒಂದು ಇಂಜಕ್ಷನ್ ಕೊಟ್ಟಿದೀನಿ... ಇನ್ನೊಂದ್ ವಾರದಲ್ಲಿ ಸರಿಹೋಗುತ್ತೆ ಅವರು ರೆಸ್ಟ್‌ನಲ್ಲಿರಲಿ ಅಡಿಗೆ ತಿಂಡಿ ಕೆಲಸ ಮಾಡಕ್ಕೆ ಬಿಡಬೇಡಿ" ಅಂದು ಇಪ್ಪತ್ತು ರೂಪಾಯಿ ಜೋಬಿಗೇರಿಸಿ ಹೋದರು.

"ಮಲ್ಕೊ ಸುಬ್ಬು" ಅಂದು ಕುತ್ತಿಗೆಯವರೆಗೂ ಹೊದಿಸಿ ಕೈಗೆ ಒಂದು ಪುಸ್ತಕ ಕೊಟ್ಟು "ರಾತ್ರಿ ಮೆತ್ತಗೆ ಅನ್ನ ಮಾಡಿ ಸಾರು ಮಾಡ್ತಾ" ಅಂದ್ರು.

"ಬೇಕಂದ್ರೆ ಮಾಮೂಲಿ ಅಡಿಗೇನೇ ಮಾಡಿ... ಆಗಿಯೋಕ್ಕೆ ಆಗ್ದಿದ್ರೇನಂತೆ ನುಂಗಿಬಿಡ್ತೀನಿ" ಎಂದು ಒಳಗೊಳಗೇ ನಕ್ಕರು.

ಸುಬ್ಬಮ್ಮನಿಗೆ "ಟ್ರೀಟ್‌ಮೆಂಟ್" ಕೊಟ್ಟ ಡಾಕ್ಟರು ಮನೆಗೆ ಹೋದಾಗ ಪುಟ್ಟ ಮಗಳು "ಅಪ್ಪಾ ಅಮ್ಮಂಗೆ ತುಂಬಾ ಹಲ್ ನೋವಂತೆ ನಂಗೆ ನೀನೇ ಬೋರ್ನ್‌ವಿಟಾ ಮಿಕ್ಸ್ ಮಾಡಿ ಕೊಡಪ್ಪ ಅಂದು ಕೋಟು ಜಗ್ಗಿದಳು.

"ಯಾಕೋ ತುಂಬಾ ಹಲ್ಲುನೋವ್ತೊಂದ್ರೆ... ಇನ್ನೊಂದ್ ವಾರ ನನ್ ಕೈಲಿ ಅಡಿಗೆ ತಿಂಡಿ ಮಾಡೋಕೆ ಆಗಲ್ಲ ಅಂತ ಡಾಕ್ಟರ್ ಹೆಂಡ್ತಿ ನರಳಿದಾಗ ಇದೂ ಒಂದು ವಾರದ ದಂತ ಕಥೆ ಅಂದುಕೊಂಡರು ಡಾಕ್ಟರು. ಯಾವ ಹಲ್ಲು ತೋರಿಸೇ ಅಂದು ಹೆಂಡ್ತಿ ಹತ್ರ ಡಾಕ್ಟ್ರು ಹೋದಾಗ ಇದಕ್ಕೆ ಮನೆ ವೈದ್ಯರು ಸರಿಹೋಗಲ್ಲ ನಾನಾಗಲೇ ಡಾ॥ ಸರಸ್ವತಿ ಬರಹೇಳಿದ್ದೆ ಅಂದು ಮುಸುಕೆಳೆದರು ವೈದ್ಯಪತ್ನಿ.

ನಾಲ್ಕು ದಶಕಗಳ ಹಿಂದೆ

- ಭಕ್ತ

ಬೆಂಗಳೂರಿನ ಖ್ಯಾತ ಶತಾಯುಷಿಯ ನೂರನೆಯ ಹುಟ್ಟುಹಬ್ಬದ ಪುಣ್ಯದಿನವನ್ನು ಆಚರಿಸಿ ಈಗಾಗಲೇ ನಾಲ್ಕು ದಶಕಗಳು ಕಳೆದಿವೆಯೆಂದರೆ ನಿಜಕ್ಕೂ ಅಚ್ಚರಿಯೆನಿಸೀತು. ಮೈಸೂರಿನ ಜನಸಮೂಹಕ್ಕೆ ಆತನ ಬಗ್ಗೆ ಇದ್ದ ಪ್ರೀತಿ, ಗೌರವಗಳನ್ನು ವರ್ಣಿಸಲು ಪದಗಳೇ ಸಾಲದಾಗುತ್ತವೆ. ಅಂತಹ ವಿಶೇಷ ದಿನ ಮತ್ತೊಮ್ಮೆ ಬರಲಾರದು.

ಆ ಮುಂಜಾನೆ ಹಳೆಯ ಮೈಸೂರಿನ ಜನಗಳೆಲ್ಲರ ಮನದಲ್ಲಿ ಕೇವಲ ಒಂದು ಸಂಗತಿ ಅಚ್ಚೊತ್ತಿತ್ತು. ಭಾರತದ ಹೆಮ್ಮೆಯ ಪುತ್ರನೊಬ್ಬನ ನೂರನೆಯ ಹುಟ್ಟುಹಬ್ಬದ ದಿನವದು. ಆ ದಿನ ನಾನು ನಗರದ ಸುತ್ತ ಓಡಾಡಿದಾಗ ಎಲ್ಲೆಲ್ಲೂ ಹಸಿರು ಚಪ್ಪರಗಳು ಕಂಗೊಳಿಸುತ್ತಿದ್ದವು. ಮೈಸೂರು ಮಲ್ಲಿಗೆಯ ಕಂಪು ಎಲ್ಲೆಡೆಯಲ್ಲಿಯೂ ಹರಡಿತ್ತು. ಆ ದಿನದ ಕಾರ್ಯಕ್ರಮಗಳ ಮುಖ್ಯ ಅಂಶ ಲಾಲ್‌ಬಾಗಿನಲ್ಲಿತ್ತು.

ಲಾಲ್‌ಬಾಗಿಗೆ ಹೋಗುವ ರಸ್ತೆಯಲ್ಲೇ ನಮ್ಮ ಮನೆ ಇದೆ. ಅನೇಕ ಗಣ್ಯರು ನಮ್ಮ ಮನೆಯ ಮುಂದೆ ಹಾದುಹೋಗಿದ್ದಾರೆ. ಬ್ರಿಟನ್ನಿನ ರಾಣಿ ಕಾರಿನಲ್ಲಿ ನಿಂತು ಬಿಳಿಯ ಕೈಚೀಲ ತೊಟ್ಟ ಮುಂಗೈಯನ್ನು ಹಗುರವಾಗಿ ಬೀಸುತ್ತಿದ್ದಾಗ ಆಕೆಯ ಮಗ ರಾಜಕುಮಾರ ಸುಸ್ತಾಗಿದ್ದಂತೆ ಕಂಡದ್ದು, ಲೆಕ್ಕವಿಲ್ಲದಷ್ಟು ಬಾರಿ ನಮ್ಮ ದೇಶದ ರಾಣಿಯೇ ಆಗಿದ್ದ ಇಂದಿರಾ ರಾಜಠೀವಿಯಿಂದ ಓಡಾಡಿದ್ದು ಇವೆಲ್ಲಾ ನೆನಪಿಗೆ ಬರುತ್ತವೆ. ಆದರೂ ಆ ದಿನ ನಮ್ಮ ಮನೆಯ ಮುಂದೆ ನಿಂತಿದ್ದ ಜನಸಮೂಹ ಒಂದು ವಿಭಿನ್ನರೀತಿಯದ್ದಾಗಿತ್ತು. ಯಾವುದೋ ರಾಷ್ಟ್ರದ ಮುಖಂಡನನ್ನು ನೋಡುವ ಉದ್ದೇಶದಿಂದ ಈ ಜನರು ಬಂದಿರಲಿಲ್ಲ. ಒಬ್ಬ ಮಹಾನ್ ವ್ಯಕ್ತಿಗೆ ತಮ್ಮ ಪ್ರೀತಿ ಪ್ರೇಮಗಳನ್ನು ತೋರಿಸಲೋಸುಗ ಅವರು ಇಲ್ಲಿ ಕಾದು ನಿಂತಿದ್ದರು. ನಾನೂ ಸಹಾ ಗೇಟ್ ತೆಗೆದು ಆ ಗುಂಪನ್ನು ಸೇರಿದೆ.

ತೀರ ಕೃಶಕಾಯದ ಆ ವೃದ್ಧ, ಸ್ವಲ್ಪ ದೊಡ್ಡದೇ ಎನ್ನಬಹುದಾದ ಮೈಸೂರು ಪೇಟವನ್ನು ಧರಿಸಿ, ಜನತೆಗೆ ತಮ್ಮ ಕೈಗಳನ್ನು ಮುಗಿಯುವಂತೆ ಜೋಡಿಸಿ ಕಾರಿನ ಹಿಂದಿನ ಸೀಟಿನಲ್ಲಿ ಒರಗಿದ್ದರು. ರಸ್ತೆಯಲ್ಲಿ ಜನ ತುಂಬಿದ್ದರಿಂದ ಆ ಸಂಜೆಯ

ಕಾರ್ಯಕ್ರಮಕ್ಕೆ ಅವರು ಹಲವು ನಿಮಿಷಗಳಷ್ಟು ತಡವಾಗಿ ಸೇರಿದರಂತೆ. ಭಾಷಣ ಮಾಡಲು ನಿಂತಾಗ ಅವರ ಮೊದಲ ವಾಕ್ಯವೇ ತಡವಾಗಿ ಬಂದುದಕ್ಕೆ ಕ್ಷಮಾಪಣೆ ಕೇಳುವ ಮೂಲಕ ಪ್ರಾರಂಭವಾಯಿತಂತೆ.

ಆ ರಾತ್ರಿ ಲಾಲ್‌ಬಾಗ್ ಕಾರ್ಯಕ್ರಮದ ನಂತರ ರಾಜಭವನ ರಸ್ತೆಯಲ್ಲಿದ್ದ ಅವರ ಮನೆಯ ಮುಂದೆ ಹೋದೆ. ಆಕಾಶವೆಲ್ಲಾ ಬಾಣ ಬಿರುಸುಗಳಿಂದ ತುಂಬಿತ್ತು. ಅವರ ಮನೆಯ ಗೇಟ್ ತೆರೆದಿತ್ತು. ಜನಗಳು ಮುಕ್ತವಾಗಿ ಒಳಗೆ ಹೋಗುತ್ತಿದ್ದರು. ನಾನೂ ಒಳಗೆ ನಡೆದೆ. ಮದುವೆ ಮನೆಯಂತೆ ದೀಪಗಳಿಂದ ಝಗಝಗಿಸುತ್ತಿದ್ದ ಆ ಸೌಧದಲ್ಲಿ ಹೂವು, ಹಾರಗಳು ಚೆಲ್ಲಾಡಿದ್ದವು. ಆದರೂ ಮನೆಯಲ್ಲಿ ಗಲಾಟೆ ಇರಲಿಲ್ಲ. ಜನಗಳು ಬಂದು ಹೋಗಲು ಏನೂ ಅಡಚಣೆಯಿದ್ದಂತೆ ಕಾಣಲಿಲ್ಲ. ಬೆಳಕಿನಿಂದ ಪ್ರಕಾಶಮಾನವಾಗಿದ್ದ ವೆರಾಂಡಾದಲ್ಲಿದ್ದ ಎಡಬಾಗಿಲನ್ನು ದಾಟಿ ಒಳಕ್ಕೆ ನಡೆದಾಗ ಆ ವ್ಯಕ್ತಿ ಮಂಚದ ಮೇಲೆ ದಿಂಬುಗಳಿಗೆ ಒರಗಿ ಕುಳಿತಿರುವುದನ್ನು ಕಾಣಬಹುದಾಗಿತ್ತು. ಸಾವಿರಾರು ಫೋಟೋಗಳಲ್ಲಿ ಅಸಂಖ್ಯಾತ ಬಾರಿ ನೋಡಿದ್ದ ಆ ವ್ಯಕ್ತಿಯನ್ನು ಇಷ್ಟು ಹತ್ತಿರದಿಂದ ನೋಡುವುದು ನಿಜಕ್ಕೂ ಒಂದು ರೋಮಾಂಚನ ಅನುಭವ ಅನ್ನಿಸಿತು.

ಪ್ರದರ್ಶನಕ್ಕಾಗಿ ಇಟ್ಟಂತಿದ್ದ ಅವರು, ತಮ್ಮ ಎಂದಿನ ಉಡುಪಾದ ಸೂಟು, ಟೈ, ಪೇಟಗಳನ್ನು ಧರಿಸಿದ್ದರು. ಅವರ ಷೂಗಳು ಪಾಲಿಶ್‌ನಿಂದ ಮಿರಮಿರನೆ ಮಿರುಗುತ್ತಿದ್ದವು. ನಾನು ಮೌನವಾಗಿ ಆ ಕೊಠಡಿಯ ಮೂಲೆಯೊಂದರಲ್ಲಿ ನಿಂತು ಸಂಪೂರ್ಣ ದೃಶ್ಯವನ್ನು ಹೀರುತ್ತಿದ್ದೆ. ಜನ ಸತತವಾಗಿ ಬರುತ್ತಲೇ ಇದ್ದರು. ಬಿಡಿ ಹೂವುಗಳು, ಹೂವಿನ ಹಾರಗಳು ಇವನ್ನು ಹಿಡಿದು ತಿರುಪತಿಯ ಗರ್ಭಗುಡಿಯನ್ನು ಹೋಗುವಂತೆ ಅವರು ಕೊಠಡಿ ಬಾಗಿಲನ್ನು ದಾಟಿ ಬರುತ್ತಿದ್ದರು. ನೂರು ವರ್ಷ ವಯಸ್ಸಿನ ಆ ಕೃಶಕಾಯದ ವ್ಯಕ್ತಿಗೆ, ಕ್ರೂರ ಭಾರತೀಯ ಸಂಪ್ರದಾಯವಾದ ಗೌರವಾರ್ಪಣೆ ಸಲ್ಲಿಸುವುದನ್ನು ನಾನು ನೋಡಬೇಕಾಯಿತು.

ಮೊದಲಿಗೆ, ಗೌರವ ಸಲ್ಲಿಸುವ ವ್ಯಕ್ತಿ ತನ್ನ ಪಾದರಕ್ಷೆಗಳನ್ನು ಕಳಚಿ ಹೊರಗಿಟ್ಟು ಕೊಠಡಿಯ ಬಳಿಗೆ ಬಂದು ತಾನು ತಂದಿದ್ದ ಹಾರವನ್ನು ಅವರ ಕೊರಳಿಗೆ ಹಾಕುತ್ತಿದ್ದ. ಅನಂತರ ಮಂಚದ ಕಾಲಿನೆಡೆಗೆ ಹೋಗಿ ಅವರ ಷೂಗಳನ್ನು ಭದ್ರವಾಗಿ ಹಿಡಿದು ಅವರ ಆಶೀರ್ವಾದವನ್ನು ಬೇಡುತ್ತಿದ್ದ. ಪ್ರತಿಬಾರಿ

ಯಾರಾದರೂ ಹೀಗೆ ಮಾಡಿದಾಗ ಆ ಮಹಾನ್ ವ್ಯಕ್ತಿಗೆ ಹಿಂಸೆಯಾದಂತೆ ತೋರುತ್ತಿತ್ತು. ತೀರ ದೈನ್ಯತೆಯಿಂದ ಅವರು "ಬೇಡಪ್ಪಾ, ಬೇಡ. ದಯವಿಟ್ಟು ಬೇಡ" ಎಂದು ಕೇಳಿಕೊಳ್ಳುತ್ತಲೇ ಇದ್ದರು. ಆ ಮಾತುಗಳಿಂದ ಉತ್ತೇಜಿತನಾದಂತೆ ಕಂಡ ಆ ನಮಿಸುವ ವ್ಯಕ್ತಿ ಇನ್ನೂ ಜೋರಾಗಿ ಅವರ ಕಾಲುಗಳನ್ನು ಹಿಡಿದು, "ನಿಮಗೆ ಮಾಡದೇ ಯಾರಿಗೆ ಮಾಡಬೇಕು ಸ್ವಾಮಿ, ನೀವೇ ದೇವರು" ಎನ್ನುತ್ತಿದ್ದ. ನೂರಾರು ಜನರು ಒಬ್ಬರಾದ ಮೇಲೆ ಒಬ್ಬರು ಬಿಡುವಿಲ್ಲದೇ ಬಂದು ಈ ರೀತಿ ಗೌರವ ಸಲ್ಲಿಸುವುದನ್ನು ನೋಡಲಾರದೆ ನಾನು ಹೊರಬಂದೆ.

ಸರ್. ಎಂ. ವಿಶ್ವೇಶ್ವರಯ್ಯನವರು ಇದಾದ ಸ್ವಲ್ಪ ದಿನಗಳಲ್ಲೇ ವಿಧಿವಶರಾದರು. ಆ ದಿನ ಅವರನ್ನು ಅಷ್ಟು ಸಾರ್ವಜನಿಕವಾಗಿ "ಗೌರವಿಸದೇ" ಇದ್ದಿದ್ದರೆ, ಬಹುಶಃ ಅವರು ನಮ್ಮೊಂದಿಗೆ ಇನ್ನಷ್ಟು ಕಾಲ ಇರುತ್ತಿದ್ದರೇನೋ. ಅತ್ಯಮೂಲ್ಯ ಆಸ್ತಿಯೊಂದನ್ನು ಅತ್ಯಂತ ಜಾಗರೂಕತೆಯಿಂದ, ಸಂವೇದನೆಯಿಂದ ರಕ್ಷಿಸಬೇಕಾದ ಅಗತ್ಯವನ್ನು ನಾವು ನಮ್ಮ ಸಂಭ್ರಮ ಸಮಾರಂಭಗಳಲ್ಲಿ ಮರೆತುಬಿಡುತ್ತೇವೇನೋ ಅನ್ನಿಸುತ್ತದೆ.

★★★

ಅಂತ್ಯ ಯಾತ್ರೆ

ದಿನಕೊಂದು ಕಾರು
ಏರಿ ತಿರುಗುವ ಜನರು
ಬೀದಿಯಲಿ ನಡೆದರದು
ಪಾದ ಯಾತ್ರೆ

ಬರಿಗಾಲು, ಹರಿದುಡುಗೆ
ನಡೆವ ಬಡವನ ಹಿಡಿದು
ಏರಿಸಿದರೆ ಬಾಡಿಗೆ ಕಾರು
ಅದು ಅವನ ಅಂತ್ಯ ಯಾತ್ರೆ

– ಮ.ಗು. ಬಿರಾದಾರ

ಪಂಕ್ಷನ್ನಿನಲ್ಲಿ ತೋಚಿದಂತೆಲ್ಲ ಗೀಚಿದ್ದು

– ಎಸ್.ಎನ್. ಶಿವಸ್ವಾಮಿ

''ಏನ್ಸಾರ್, ಮೊನ್ನೆ ಅದ್ಯಾವುದೋ ಪಂಕ್ಷನ್‌ಗೆ ಹೋಗ್ಬೇಕು ಅಂತ ಹೇಳ್ತಿದ್ದಿರಲ್ಲಾ, ಹೋಗಿದ್ರಾ?''

''ಹೋಗಿದ್ದೆ. ಅವತ್ತಿನ ಪಂಕ್ಷನ್ನಿಗೆ ಪಂಕ್ಚುಯಲ್ಲಾಗಿ ಹೋಗೋಣ ಅಂತ ಹೊರಟರೆ, ನನ್ನ ಕಾರ್ ಟೈರು ಪಂಕ್ಚರ್! ಸರಿ, ನನ್ನ ಸ್ನೇಹಿತ ಪಂಚಾಕ್ಷರಯ್ಯನ ಸ್ಕೂಟರಲ್ಲಿ ಹೋದೆ.''

''ಪಂಚಾಕ್ಷರಯ್ಯ? ಅಂದ್ರೆ ವರ್ಷ ವರ್ಷ ಪಂಡರಾಪುರಕ್ಕೆ ಯಾತ್ರೆ ಹೋಗ್ತಿರ್ತಾನಲ್ಲ, ಅವನಾ?''

''ಅವನೇ. ಅವನ ಅಡ್ಡ ಹೆಸರು ಪನ್ನೀರುಧಾನಿ ಅಂತ ನಿಮ್ಗೆ ಗೊತ್ತಲ್ಲ?''

''ಗೊತ್ತಿಲ್ದೆ ಏನು! ಅವನ ಎದುರಿಗೆ ನಿಂತು ಮಾತಾಡೋರ್ಗೆಲ್ಲ ಗೊತ್ತು, ಅವನಿಗೂ ಇನ್ವಿಟೇಷನ್ ಬಂದಿತ್ತೂ ಅನ್ನಿ.''

''ಇಲ್ಲ. ಪಂಕ್ಷನ್ ವಿಚಾರ ಅವನಿಗೆ ಗೊತ್ತಿರ್ಲಿಲ್ಲ. ನಾನೇ ಎರಡು ಪಂಕ್ತಿ ಚೀಟಿ ಬರೆದು ಕಳಿಸಿದೆ. ಪಂಚಾಯಿತಿಯೆಲ್ಲ ಆಗೋ ಅಷ್ಟರಲ್ಲಿ ಸ್ವಲ್ಪ ಲೇಟೇ ಆಯ್ತು. ನಾನು ಲೇಟಾಗಿ ಹೋಗೋ ಪಂಗಡಕ್ಕೆ ಸೇರಿದೋನಲ್ಲ. ಆದ್ರೂ ಹೋದೆ ಪನ್ ಅಂದ್ರೆ ನನಗೆ ಪಂಚಪ್ರಾಣ. ಪಂಚ್ ನನ್ನ ಮೆಚ್ಚಿನ ಪತ್ರಿಕೆ. ಅದು ಪಂಚೇಂದ್ರಿಯಗಳಿಗೂ ಟಾನಿಕ್ ಇದ್ದಹಾಗೆ! ಪಂಕಜ್‌ಮಲ್ಲಿಕ್ ನನ್ನ ನೆಚ್ಚಿನ ಗಾಯಕ. ಪನ್ನೇರಳೆ ಹಣ್ಣು ನನಗೆ ಪ್ರಿಯವಾದ ಹಣ್ಣು.''

''ಹೌದು. ಅಂದ್ಹಾಗೆ, ಪಂಕ್ಷನ್ನಿಗೆ ಬಂದೋರಿಗೆಲ್ಲ ಪಂಚಪಾತ್ರೇಲಿ ಕಾಫೀನೋ?''

ಇಲ್ಲ, ನಾನೂ ಮುಂದಿನ ಸಲ ಹಾಗೇ ಮಾಡೀಂತ ಸಲಹೆ ಮಾಡಿದೆ. ಇನ್ನೊಂದು ಸಲ, ಏನಾದ್ರೂ ಪಂದ್ಯ ಇರ್ಲಿ ಅಂತಾನೂ ಸಲಹೆ ಮಾಡಿದೆ.

''ಒಳ್ಳೆ ಸಲಹೆ, ಪಂಚೇರು ಕಡ್ಲೆಕಾಯಿ ಯಾರು ಬೇಗ ತಿಂದು ಮುಗಿಸ್ತಾರೋ ಅವರಿಗೆ ಒಂದು ಜತೆ ಪಂಚೆ ಇನಾಮು, ಅಲ್ವೆ?

''ನಾನು ಪಂಜಾಬಿನಲ್ಲಿದ್ದಾಗ ಇಂಥ ಪಂದ್ಯಗಳು ಮಾಮೂಲು. ಪಂಚಕಲಶದ ತುಂಬ ಪಂಚಾಮೃತ ತಿನ್ನೋದು, ಹೀಗೆ.''

''ಆಮೇಲೆ ಪಂಕ್ಷನ್ ಹ್ಯಾಗಿತ್ತು, ಹೇಳಿ.''

''ಚೆನ್ನಾಗಿತ್ತು. ಪವರ್ ಇತ್ತು, ಪಂಚ್ ಇತ್ತು. ಇಲ್ಲಿದ್ರೆ ಎಲ್ರೂ ಜೀವರ್ತಾ ಪಂಜರದಲ್ಲಿ ಪನಿಷ್‌ಮೆಂಟ್ ಅನುಭವಿಸಬೇಕಾಗಿರ್ತಿತ್ತು.''

''ಆಗ ನಿಮ್ಮ ಪಂಜಾಯ್‌ಮೆಂಟಿಗೇ ಪಂಗನಾಮ ಆಗ್ತಿತ್ತು!''

''ಇನ್ನೊಂದು ಸಲಹೆ ಮಾಡಿದೆ. ಪಸ್ನುಡಿ ಉದುರಿಸಿಡೋರ್ಗೆಲ್ಲ ಪಸ್ಮಯಾನಂದ ಪಂಡಿತ ಅನ್ನೋ ಬಿರುದು ಕೊಡಲೇಬೇಕೂಂತ.''

''ಅಂತೂ ಪಂಕ್ಷನ್ ಪಂಜಾಯೆಬ್ಲ್ ಆಗಿತ್ತು ಅನ್ನಿ!

ಓದುಗರ ಪತ್ರ

ಶ್ರೀ ಶಿವಕುಮಾರ್‌ರವರಿಗೆ ನಮಸ್ಕಾರಗಳು,

Wonderful! June 03 ಸಂಚಿಕೆ ನೋಡಿದಾಗ ಮತ್ತು ನಿಮ್ಮ immediate action. Keep it up. ತಪ್ಪು ತಿಳಿಯಬೇಡಿ. ನಾನು ಸುಧಾ, ತರಂಗ, ಕಸ್ತೂರಿ etc., ಎಲ್ಲದಕ್ಕೂ Subscriber. ಎಲ್ಲಾ ಒಂದಲ್ಲ ಒಂದು bore ಇಲ್ಲಾ Diabetes ಅಥವಾ Everest. ಇದು ಹೊಸದೇ. ತಾತರಾಯನ ಕಾಲದಿಂದಲೂ ಎಲ್ಲರಿಗೂ ತಿಳಿಯದ ವಿಷಯವೇ. ಸುಧಾ 'ನಗು ಹೊನಲು' ಬರೆದವ, ಬರೆಯುವವ ಸಿಕ್ಕಿದರೇ ಪಾಪ ಅವನ ಗತಿ. ನಿಜಕ್ಕೂ ಅಪರಂಜಿ improved. 60% ಕೊಟ್ಟಿದ್ದೇನೆ. 100% ನಿರೀಕ್ಷಿಸಲೇ.

ಬೇಲೂರು ರವರಿಗೆ ತೊಂದರೆ ಕೊಡಬೇಡಿ. ನಾನೇ ಬಳೇಪೇಟೆಗೆ ಹೋಗಿ ಪೈಲ್ವಾನ್ ಪಿಳ್ಳಪ್ಪನನ್ನು ಅವನ ಗರಡೀಲಿ meet ಮಾಡಿದೆ. Dont worry ಅಪರಂಜಿ ನಿಜಕ್ಕೂ ಬೇಗಲೇ ಅಪರಂಜಿ ಆಗ್ತಾಳೆ have patience ಅಂದ.

ಮತ್ತೊಮ್ಮೆ Thanks.

Regards

ಎನ್.ಆರ್.ವಿ. ರಾವ್

ತಿಳೀತ್ ಬಿಡ್ರೀ

- ಭುವನೇಶ್ವರಿ ಹೆಗಡೆ

(ಮೇ ತಿಂಗಳ ಅಪರಂಜಿಯ 'ತಿಳಿತೇನ್ರೀ' ಲೇಖನದಿಂದ ಸ್ಫೂರ್ತಿ ಅಂತ ನಿಮಗೆ ತಿಳಿಸ್ತೇನ್ರೀ?)

ಏನs ಈಕೀನ ಬಾ ಇಲ್ಲೆ, ಸ್ವಲ್ಪ ಗಪ್ ಕೂಡು. ಅದೇನೋ ತಿಳೀತೇನ್ರೀ ತಿಳಿತೇನ್ರೀ ಅಂತ ಹಚ್ಚೇಯಲ್ಲ ಒಂದs ಸವನ ಹಿಂಗ ವದರಾಡಾಕ ಹತ್ತೀ ಅಂದ್ರ ಮಗ್ಗಲ ಮನೀ ಮಂದಿ ಏನ್ ಅಂತಾರ? ಆರೇ ಗಂಡ ಬಾಯs ಬಿಡವಲ್ಲ. ಈಕಿ ಬಾಯಿ ಮುಚ್ಚುವಲ್ಲಳು ಜೋಡಿ ಅಂದ್ರ ಜೋಡಿ ಹಿಂಗಿರಬೇಕು ನೋಡ್ರೀ ಅಂತಾರ. ಅದ್ಕ ಅಂತೀನಿ ಹೆಂಡತಿಯೇನಾರ ವದರಲಿಕ್ಹತ್ತಿದ್ಲು ಅಂದ್ರ ಎದುರು ವದರೋ ತಾಕತ್ತಿದ್ರ ಮಾತ್ರ ಕೂಡ್ರಿ ಇಲ್ಲಾಂದ್ರ ಸುಮ್ಮ ಎದ್ದು ಹೋಗ್ರಿ ಅಂಬೋದು ತಿಳೀತ್‌ಬಿಡ್ರಿ.

★★★

ಗೊತ್ತಾತ್ ಬಿಡವ್ವ, ನಾನು ಸ್ವಲ್ಪ ಆರಾಮ್ನಾಗ ಕೂತು ಗೀತಾ ಪಠಣ ಶುರೂ ಮಾಡಿದೆ ಅಂದ್ರೆ ನಿನಗೆ ಹೊಟ್ಟೆಕಿಚ್ಚು ಶುರೂ ಆಗ್ತದ. ಮಗನs ನೀ ಮಾಡೂ ಕೆಲಸ ಮಾಡ್ತಾ ಹೋಗು ಲಾಭಾ ಲೆಕ್ಕ ಹಾಕ್ತಾ ಕೂಡಬ್ಯಾಡ ಅಂತ ಗೀತಾದಾಗ ಬರ್ದದ. ಅದನ್ನ ಓದಿ ನಾ ಹಳ್ಳಕ್ಕೆ ಬಿದ್ದೇನಿ ನಿಮ್ಮಪ್ಪ ತೋಡಿಟ್ಟ ಹಳ್ಳದಾಗ ಬಿದ್ದಂತೂ ಆಗೇದ ಎದ್ದು ಬರೋದಾರಿ ಏನಾರ ಸಿಗ್ತಾವೇನೋ ಅಂತ ಗೀತಾದಾಗ ಹುಡುಕ್ಲಿಕ್ಹತ್ತೀನಿ. ರೇಶನ್ ಅಂಗಡಿ, ಸಾಮಾನು ಮೂಟೆ, ನಿನ್ನ ಕಣ್ಣೀರು ನಿಮ್ಮ ಬಳಗದ ಊಟೋಪಚಾರದ ಬಿಲ್ಲು, ನಿನ್ನ ತಮ್ಮನ ಪಾಕೆಟ್ ಮನಿ... ಎಲ್ಲಾ ಲೆಕ್ಕಾಚಾರ ನಿನ್ನ ಮುಂದ ತೆಗೀವಂಗ ಉದಾರ ಜೀವಿ ನಾನಾಗ್ಲಿಕ್ಕೆ ಈ ಗೀತಾ ಕಾರಣ ಅನ್ನೋದು ನಿನಗೇನಾರ ಗೊತ್ತಾಗಿದ್ರ ನೀ ಹಿಂಗ ಮಾತಾಡ್ತಿರಲಿಲ್ಲಾ ಅಂಬೋದು ತಿಳೀತ್ ಬಿಡು.

★★★

ನಮ್ಮ ಪುಣಪುತ್ರ ರಾಮ್ಯಾನ ಹೆಸ್ರು ಬೆಳಿಬೆಳಿಗ್ಗೆ ತೆಗ್ದು ಹೆಸರಿಸಬ್ಯಾಡವಾ. ಅಂವಗ ಘಟೋತ್ಕಜ ಅಂತ ಹೆಸರಿಡದೇ ರಾಮ ಅಂತ ಇಟ್ಟೇವಲ್ಲ ಅದು ತಪ್ಪಾತು. ಹುಟ್ದಾಗಿಂದ ನನ್ನ ಮ್ಯಾಲ ಸೇಡು ತೀರಿಸಿಕೊಳ್ಳಿಕ್ಕೆ ಹತ್ಯಾನ ಅಂವ. ಬೇಕಾದ್ರ ಒಳ್ಗ ಪಂಖಾ ಹಾಕ್ತೀನಿ ಕೈಯಾಗ ಗಾಳಿ ಬೀಸ್ತೀನಿ - ಆದ್ರ ಹೊರಗ ಕರ್ಕೊಂಡು ಹೋಗಾಕ ಮಾತ್ರ ಒಲ್ಲೆ, ಮೊನ್ನೆ ಇವನನ್ನ ಎತ್ತಿಕೊಂಡು ಗಾಳ್ಯಾಗ ಅಡ್ಡಾಡ್ಲಿಕ್ಕೆ

ಹತ್ತಿಪ್ನಲ್ಲಿ. ದಾರೀಲಿ ನಮ್ಮ ಡಿ.ಡಿ.ಪಿ.ಐ. ಸಾಯೇಬ್ರು ಸಿಕ್ರು, ನಾನು ''ನಮಸ್ಕಾರ್ರೀ ಸರ'' ಅಂದಿದ್ದೇ ತಡ ಇಂಥಾ 'ಕೀಕ್' ಅಂದ. ನನ್ನ ನಮಸ್ಕಾರ ಎಲ್ಲಾಸುಳ್ಳು ಅನ್ನೋ ಹಂಗ ಸ್ವರಾ ತೆಗದ. ಗಲ್ಲಾ ಮುಟ್ಟಲಿಕ್ಕೆ ಬಂದ ಡಿ.ಡಿ.ಪಿ.ಐ. ಹೆಂಡತೀಗೆ ಧೂಡಿಸಿ ಒದ್ದ. ಮುದ್ದು ಮಾಡೋಕ್ಕ ಹತ್ರ ಮುಖ ತಂದ ಸಾಹೇಬ್ರ ಮೀಸಿ ಜಗ್ಗಿ ಕೇಕೆ ಹಾಕ್ದ... ಅವರು ಸಿಟ್ಟಿಗೆದ್ದು ನನ್ನನ್ನು ನೀರಿಲ್ಲದೂರಿಗೆ ಟ್ರಾನ್ಸ್‌ಫರ್ ಮಾಡೂದು ಖಾತ್ರಿ ಅಂಬೋದು ಆವತ್ತ ತಿಳೀದು ಬಿಡು.

★★★

ಹಿಂದಿನ ಜನ್ಮದಾಗ ಹೆಂಥಾ ಪಾಪ ಮಾಡಿದ್ನೋ ನನಗ ಮಾಸ್ತರಕಿ ಗಂಟು ಬಿದ್ದದ (ಜತೆಗೆ ನೀನೂ) ಎರಡನೂ ಅನ್ನೂ ಹಂಗಿಲ್ಲ ಅನುಭವಿಸೂ ಹಂಗಿಲ್ಲ. ಶಾಲೇದಾಗಿನ ಆ ಸುಡುಗಾಡ್ ಕಮಂಗಿಗಳ ನೆನಪು ಮಾಡಿ ಮೊದಲs ಬಿಸಿಯಾದ ತೆಲಿ ಮತ್ತಷ್ಟು ಕದಡಬ್ಯಾಡ. ನಮ್ಮ ಒಂದು ಘಟೋತ್ಕಜನ್ನ ಸಂಭಾಳಿಸೋದ್ರಾಗ ನೀ ಎಷ್ಟು ಹೈರಾಣಾಗ್ರಿ? ಅಂತಾ ನೂರಾರು ಘಟೋತ್ಕಜರ ಚೀತ್ಕಾರ ಫೂತ್ಕಾರಗಳನ್ನ ಉಸಿರಾಡಿಸಿ ಬದುಕಬೇಕಾದ ನಾವು ಆಗೀಗ ಒಂದು ಛಾ ಕುಡದ್ರ ಮಾತ್ರ ಛಾತಿ ಬಹುದು. ತಿಳ್ಕೋ ''ಒದರಿ ಒದರಿ ನೆಗೆದು ಬಿದ್ದ'' ಅನ್ನೋ ಸುದಿದ ಒಂದು ಖಾತ್ರಿ ಪೇಪರ್ನಾಗ ಬಂದ ಬರ್ತದ ಅನ್ನೋದು ಗೊತ್ತು ಬಿಡು.

★★★

'ನಳದಾಗ ನೀರು ಬಂದದ' ಅನ್ನೋ ಧಾರವಾಡೀ ಪ್ರಯೋಗಾನ್ನ ಈ ಸಾಹಿತಿಗೋಳು ತಮಾಶೆ ಮಾಡ್ಲಿಕ್ಹತ್ತಿದಾಗಿಂದ ನಮ್ಮ ನಳದಾಗ ನೀರು ಬಂದs ಆಗ್ಬಿಟ್ಟದ ನೋಡು. ಈ ವರ್ಷಾ ನೀನೊಬ್ಬ ಅಲ್ಲ ಬಿಡು ಸಮಸ್ತ ಕರ್ನಾಟಕವೂ ನೀರು ನೀರು ಅಂತ ಬಾಯಿಬಿಡೂ ಹಂಗಾಗೇದ. ಅಂತಾದ್ರಾಗ ನಿಮ್ಮವ್ವ ಕೊಡಾ ಕೊಟ್ಟಾಳ ಅಂತ ಸುಳ್ಳ ಯಾಕ ಬಾಯ್ ಬಡ್ಕೋತಿ? ಶಾನಭೋಗರ ಭಾವೀ ಮುಂದೆ ನನ್ನಂಥ ಸದ್ಗೃಹಸ್ಥರ ಸರತೀ ಸಾಲ ಶುರುವಾಗ್ಯೇದಂತ. ನಮ್ಮ ಡಿ.ಡಿ.ಪಿ.ಐ.ಗೆ ಹೇಳಿ ಮಂಗಳೂರ ಕಡೀ ಆದ್ರು ಹಾಕಿ ಅನ್ನಲೇನು? ಉಪ್ಪುನೀರು ಕುಡ್ದಾದ್ರು ಬದ್ಕೊಳ್ಳೋಣ.

★★★

ನೋಡೂ ನಿನ್ನ ಸಂಕೇ ಬುದ್ಧಿ ನನಗ ಚೂರೂ ಹಿಡ್ಸೂದಿಲ್ಲ. ಗೌಡ್ರ ಹೆಂಡ್ರು ಪಾರವ್ವ, ಪಕ್ಕದ ಮನಿ ಕಮಲಿ ಇನ್ಯಾವುದೇ ಗಿಮಲಿ ''ಮಾಸ್ತರ್ರs ನನ್ನ ಮಗಂಗ ಕಾಣುಣಿತ ಕಲಸ್ರೀ ಗಣಿತಾ ಕಲಸ್ರೀ ಅಂತಂದು ವರಾತ ಹಚ್ಚಿದ್ರೂ

ಅಂದ್ರ, ತಮ್ಮ ಮಕ್ಕಳು ನಾಲ್ಕಕ್ಷರಾ ಕಲ್ತು ಮುಂದ ಶಾಣೇರಾಗ್ಲಿ ಅಂತಾವ ಹೊರ್ತು ನಿನ್ನ ಗಂಡ ಪ್ರಾಣೇನಽ ಮಾತಾಡ್ಲೂದಕ್ಕ ಖಂಡಿತ ಅಲ್ಲ. ಅಷ್ಟಕ್ಕ ಬಡ ಶಾಲಾ ಮಾಸ್ತರ ನಾನು ಅಂಬೋದು ನೆಪ್ಪಿರಲಿ ನಿನಗ.

★★★

ಅಮೇರಿಕಾದಾಗ ಗಂಡ ಗೊರಕೀ ಹೊಡಿತಾನ ಅಂತ ಡೈವೋರ್ಸ್ ತಗೋತಾರಂತ. ನೀನ ಹಂಗ ಹೋದ್ರ ಹೋಗ್ಲಿ ಅಂತ ನನ್ನ ಗೊರಕೀ ಖಾಯಿಲೆಗೆ ನಾ ಮದ್ದ ಮಾಡಾಂಗಿಲ್ಲ. ಅದ್ರ ನೀ ಅಗ್ದೀ ಬೆರಕೀ ಇದ್ದೀ ಬಿಡು. ನನ್ನನ್ನ ಬಿಟ್ಟು ನೀ ಎಲ್ಲಿ ಹೋಗ್ತಿ? ನಿನ್ನ ಮದ್ವಿ ಮಾಡಿಕೊಡುವಾಗ ನಿನ್ನ ಅಜ್ಜಾ ಮಾಡ್ದಂಗ ಈಗ್ಲೂ ನಿಮ್ಮಪ್ಪ ಮಾಡ್ತಾನಂತಿಯೇನು? ಒಮ್ಮ ಹೋಗಿ ನೋಡಲಾ ಗೊರಕೀನಽ ಇರಲಿ ಅಂತ ವಾಪಸ್ಸ ಬಂದೇ ಬರ್ತಿ ಅಂತ ನನಗೆ ಗೊತ್ತು ಬಿಡು.

★★★

ಕೊನೇದಾಗ ನಾ ಇಷ್ಟ ತಿಳ್ಕೊಂಡೇನಿ ಕೇಳು. ಸಂಸಾರ ಅಂದಮ್ಯಾಗ ಇವೆಲ್ಲ ಇರೂದನ ಹೌದಿಲ್ಲೋ? ನಾ ಗೊರಕೀ ಹೊಡೆಯೂದು ನೀ ಹರಟೀ ಹೊಡೆಯೂದು ಇಬ್ಬರೂ ಮುನಿಸ್ಕೊಂಡಾಗ ಮಕ್ಕಳಿಗೆ ಹೊಡೆಯೂದು ಬಾಜೂ ಮನಿಯಾಕಿ ಲೊಚಗುಟ್ಟಿ ಸಮಾಧಾನ ಹೇಳೂದು... ಇದ್ದ ಇರ್ತದ ಬಿಡು. ಈಟ ದಿನ ಜತೀಗಿ ಬಾಳ್ವೆ ಮಾಡೇವಿ ಇನ್ನು ನಾಲ್ಕು ದಿನ ಯಾಕಾರ ಮಾರಿ ಒಣಗಿಸ್ಕೊಳ್ಳೋಣು? ಸುಳ್ಳ ನಕ್ಷಂಗ ಮಾಡ್ಕೋತ ಇದ್ದು ಬಿಡೋಣ ಅತಿಲ್ಲೋ?

★★★

ಜಾಹಿರಾತು

ಗಳಿಸುವ ಹೆಣ್ಣೊಂದು
ಗಂಡು ಬೇಕಾಗಿದೆ
ಮಕ್ಕಳಿಗಾಗಿ
ಆಮೇಲೆ ಬೇಕಾದರೂ ಇರಲಿ
ಅವಳ ತಾಳಿ ಕುಂಕುಮಕಾಗಿ

– ಮ.ಗು. ಬಿರಾದಾರ

ಒಂದು ಹೊಸ ತಲೆಬಿಸಿ

- ಶಿವು

''ಏನೋ ಬೋರು ಸ್ವಾಮಿ, ಬಿಸಿನೆಸ್ಸು ಡಲ್ಲು, ಹಣ ಬರುವುದು ಡಲ್ಲು, ಜೀವನವೇ ಡಲ್ಲು'' ಎಂದೆಲ್ಲಾ ಬರೆದಿದ್ದ ಎಸ್.ಆರ್.ವಿ. ರಾಯರ ಪತ್ರವನ್ನು ಕಳೆದ ತಿಂಗಳು ಪ್ರಕಟಿಸಿದ ಮೇಲೆ ಒಂದು ಹೊಸ ತಲೆಬಿಸಿ ಶುರುವಾಗಿದೆ. ಬೆಂಗಳೂರಿನ ಮೂಲೆ ಮೂಲೆಗಳಲ್ಲಿ ಓದುಗರು ನಮಗೆ ಪತ್ರ ಬರೆದು ತಮ್ಮ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕೇಳಲು ಪ್ರಾರಂಭಿಸಿದ್ದಾರೆ. ಇಲ್ಲಿ ನೋಡಿ, ಅಶೋಕನಗರದ ಅಂದಾನಪ್ಪನವರ ಪತ್ರ.

''ಸ್ವಾಮಿ, ನಾನು ಒಬ್ಬ ಚಿಲ್ಲರೆ ಕಂಟ್ರಾಕ್ಟರ್. ಅಂಥಾದ್ದೇನೂ ಓದು ಬರಹ ಅಂತ ಇಲ್ಲದೇ ಇದ್ದರೂ, ಜೀವನ ಏನೋ ತಕ್ಕಮಟ್ಟಿಗೆ ನಡೀತಾ ಇದೆ. ನನ್ನ ಮಗ ಹೈಸ್ಕೂಲಿನಲ್ಲಿ ಓದ್ತಾ ಇದಾನೆ. ಮಗ ಚೆನ್ನಾಗಿ ಓದಿ ಪ್ಯಾಸು ಮಾಡಲಿ ಅಂತ ಅವರಮ್ಮನಿಗೆ ಆಶೆ. ಅದಕ್ಕೇ ಹಠ ಹಿಡಿದು ಅವನಿಗೆ ಕಂಪ್ಯೂಟರ್, ಇಂಟರ್ನೆಟ್ ಎಲ್ಲಾ ಕೊಡಿಸಿ ಅವನ ರೂಮಿನಲ್ಲಿ ಪ್ರತಿಷ್ಠಾಪನೆ ಮಾಡಿದಳು. ಇಂಟರ್ನೆಟ್ ಬಂದಾಗಿನಿಂದ ರಾತ್ರಿ ಹೊತ್ತು ನನ್ನ ಮಗ ಕಂಪ್ಯೂಟರ್ ಮುಂದೇನೇ ಘಂಟೆಗಟ್ಟಲೆ ಕಾಲ ಕಳೆಯೋದು. ಸಾಲದ್ದಕ್ಕೆ ರೂಮಿನ ಬಾಗಿಲಿಗೆ ಚಿಲಕ ಬೇರೆ ಹಾಕಿಕೊಂಡಿರ್ತಾನೆ. ''ಯಾಕೋ ಹಾಗೆ ಬಾಗಿಲು ಬಡಿಚ್ಕೊಂಡಿದೀಯಾ'' ಅಂತ ಕೇಳಿದ್ರೆ, ''ನಿನಗ್ಗೊತ್ತಿಲ್ಲಪ್ಪಾ, ಬಾಗಿಲು ತೆಗೆದ್ರೆ ಇಂಟರ್ನೆಟ್‌ನ ಇಲೆಕ್ಟ್ರಾನಿಕ್ ಅಲೆಗಳೆಲ್ಲಾ ಸೋರಿಹೋಗತ್ತೆ. ಆಮೇಲೆ ರಿಪೇರಿಗೆ ಬೇರೆ ಖರ್ಚು'' ಅಂತಾನೆ. ಅವ ಹೇಳೋದು ನಿಜಾನಾ?'' ಅಂತ ಕೇಳಿದಾರೆ ಅಂದಾನಪ್ಪನವರು.

ಸ್ವಾಮಿ, ಅಂದಾನಪ್ಪನವರೇ, ಮೊದಲು ಕಂಪ್ಯೂಟರ್‌ನ ಅವನ ರೂಮಿನಿಂದ ತೆಗೆದು, ಎಲ್ಲರಿಗೂ ಕಾಣೋ ಅಂತಹ ಜಾಗದಲ್ಲಿಡಿ. ಎಲ್ಲ ಸರಿಹೋಗತ್ತೆ. ಮಗ ಕೇಳಿದರೆ, ''ಇಲೆಕ್ಟ್ರಾನಿಕ್ ಅಲೆಗಳು ಮನೆಯಲ್ಲೆಲ್ಲಾ ಹರಿದಾಡಿದ್ರೆ ಆರೋಗ್ಯಕ್ಕೆ ಒಳ್ಳೇದು, ಅಂತ ಡಾಕ್ಟರ್ ಹೇಳಿದಾರೆ'' ಅಂದುಬಿಡಿ.

ಅಂದಾನಪ್ಪನವರ ಸಮಸ್ಯೆ ಹಾಗಿದ್ದರೆ, ದೇವಯ್ಯಾ ಪಾರ್ಕಿನ ದೇವೇಂದ್ರಯ್ಯನವರ ಸಮಸ್ಯೇನೇ ಬೇರೆ ತರಹದ್ದು.

''ಸಂಪಾದಕರೇ, ಮಳೆ ಬಂದಾಗ ಟ್ರಾನ್ಸ್‌ಫಾರ್ಮರ್ ಟ್ರಿಪ್ ಆಗಿ ಪವರ್ ಹೋಗೊದು ಸರ್ವೇಸಾಮಾನ್ಯ. ಎಲ್ಲರಿಗೂ ತಿಳಿದಿರೋ ವಿಷಯ. ಆದರೆ ನಮ್ಮ ಮನೆ ಮುಂದೆ ಇರೋ ಕೆಇಬಿ ಟ್ರಾನ್ಸ್‌ಫಾರ್ಮರ್‌ನ ನಡವಳಿಕೇನೇ ವಿಚಿತ್ರ. ಮಳೆ ಬರುಕ್ಕೆ ಮುಂಚೇನೆ, ಸ್ವಲ್ಪ ಕಪ್ಪು ಮೋಡ ಕಾಣಿಸಿದ್ರೆ ಸಾಕು, ಅದು ಫಠಾರ್ ಅಂತ ಶಬ್ದಮಾಡಿ, ಮಿಂಚಿನ ತರಹ ಬೆಳಕನ್ನ ಹೊರಡಿಸಿ ಟ್ರಿಪ್ಪಾಗಿ ತೆಪ್ಪಗಾಗುತ್ತದೆ. ಆಮೇಲೆ ನಾವು ಕೆಇಬಿಗೆ ಫೋನ್ ಮಾಡಿ ಅವರನ್ನ ಕರೆಸಿ ಸರಿಮಾಡಿಸಿದ್ರೇನೇ

ನಮಗೆ ಪುನಃ ಪವರ್ ಲಭ್ಯ. ಎಂಟೀವಿ ನೋಡುಕ್ಕಾಗುಲ್ಲ, ಪವರ್ ಇಲ್ದೇ ಇದ್ರೆ ಅಂತ ಮಗಳ ಕಂಪ್ಲೇಂಟ್. ಏನು ಮಾಡೋಣ.''

ದೇವೇಂದ್ರಯ್ಯನೋರೆ, ಮೊದಲು ಹವಾಮಾನ ಇಲಾಖೆಗೆ ಈ ವಿಷಯ ತಿಳಿಸಿ. ಮಳೆಯ ಮುನ್ಸೂಚನೆ ಕೊಡೋ ಸಾಧನಾನ ನೀವು ತೋರಿಸಿಕೊಟ್ಟಿದ್ದಕ್ಕೆ ಬಹುಮಾನ, ಗಿಹುಮಾನ ಕೊಟ್ಟಾರು.

ದೇವೇಂದ್ರಯ್ಯನೋರ ಮಗಳ ಎಂಟಿವಿ ಕಾರ್ಯಕ್ರಮ ಏನೋ ಸ್ವಲ್ಪ ಮಟ್ಟಿಗೆ ರುಖಾವಟ್ ಆಗಿರಬಹುದು. ಆದರೆ, ರಾಜಾಜಿನಗರದ ರಘುರಾಮರೆಡ್ಡಿಯವರ ಮಗಳ ಸಮಸ್ಯೆ ಇನ್ನೂ ಮೂಲಭೂತವಾದದ್ದು ಅನಿಸುತ್ತೆ. ಅವರ ಪತ್ರ ನೋಡಿ.

''ಮಹಾಸ್ವಾಮಿ, ರೇಖಾ (ನನ್ನ ಮಗಳು) ಪಿಯುಸಿ (ಪಿಸಿಎಂಬಿ) ಓದ್ತಾ ಇದಾಳೆ. ಪಾಠದಲ್ಲಿ ಅಷ್ಟೇನು ಚುರುಕಿಲ್ಲ. ಗೀತೆ ಪಾಠ ಕೇಳಿದ್ರೆ ಕಾನ್‌ಸನ್‌ಟ್ರೇಷನ್ ಇಂಪ್ರೂವ್ ಆಗುತ್ತೆ ಅಂತ ಯಾರೋ ಹೇಳಿದ್ರು. ಆ ಸಮಯಕ್ಕೆ ಸರಿಯಾಗಿ ನಮ್ಮ ಮನೆ ಹತ್ತಿರಾನೇ ಒಬ್ಬರು ಸ್ವಾಮೀಜಿ ಬಂದು ಗೀತೆ ಬಗ್ಗೆ ಉಪನ್ಯಾಸ ಕೊಡುಕ್ಕೆ ಶುರು ಮಾಡಿದ್ರು. ಏನೊ ಮಗಳಿಗೆ ಒಂದಿಷ್ಟು ಫಾಯಿದೆ ಆಗಬಹುದೇನೋ ಅಂದುಕೊಂಡು ಅವಳನ್ನೂ ಕರೆದುಕೊಂಡು ನಿನ್ನೆ ಸಂಜೆ ಉಪನ್ಯಾಸಕ್ಕೆ ಹೋದೆ. ಒಂದು ಎತ್ತರವಾದ ಬಿಳಿಯ ಬಟ್ಟೆ ಹೊದ್ದಿಸಿದ ಆಸನದಲ್ಲಿ ಸ್ವಾಮಿಜೀ ಕುಳಿತು ತಮ್ಮ ಉಪನ್ಯಾಸವನ್ನು ನಿರರ್ಗಳವಾಗಿ ಹೇಳುತ್ತಿದ್ದರು. ಏಳನೆಯ ಅಧ್ಯಾಯವನ್ನ ಆಗತಾನೇ ಪ್ರಾರಂಭಿಸಿದ್ದರು. ಎರಡನೇ ಶ್ಲೋಕ.

''ಯತ್ - ಯಾವುದನ್ನು, ಜ್ಞಾತ್ವಾ - ತಿಳಿದುಕೊಂಡು, ಇಹ - ಇಲ್ಲಿ, ಭೂಯಃ - ಪುನಃ, ಅನ್ಯತ್ ಜ್ಞಾತವ್ಯಂ - ಬೇರೆ ತಿಳಿಯಬೇಕಾದ್ದು, ನ ಅವಶಿಷ್ಯತೇ - ಉಳಿಯುವುದಿಲ್ಲವೋ. ಇಂತಹ ಜ್ಞಾನವನ್ನು ನಾನು ನಿನಗೆ ತಿಳಿಸುತ್ತೇನೆ.'' ಅಂತ ಪದವಿಭಾಗ ಮಾಡಿ ತಿಳಿಸಿ, ಆಮೇಲೆ ಅದರ ವಿವರಣೆ ಶುರು ಮಾಡಿದರು. ''ಭಗವಂತ ತಿಳಿಸುವ ಈ ಜ್ಞಾನದ ಮುಂದೆ ನಿಮ್ಮ ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮ್ಯಾಟಿಕ್ಸ್ ಮುಂತಾದ ಜ್ಞಾನಕ್ಕೆ ಮೂರುಕಾಸಿನ ಬೆಲೆ ಇಲ್ಲ. ಎಲ್ಲ ಜ್ಞಾನಕ್ಕೂ ಮಾತೃಪ್ರಾಯವಾದ ಜ್ಞಾನವೆಂದರೆ ಭಗವಂತ ಗೀತೆಯಲ್ಲಿ ತಿಳಿಸುವ ಜ್ಞಾನ. ಮಿಕ್ಕವನ್ನೆಲ್ಲಾ ಕಲಿಯುವುದು ಕೇವಲ ನಿರರ್ಥಕ...'' ಎಂದೆಲ್ಲಾ ಸ್ವಾಮೀಜೀ ಹೇಳುತ್ತಿದ್ದಾಗ ರೇಖಾ ತದೇಕಚಿತ್ತದಿಂದ ಕೇಳಿಸಿಕೊಳ್ಳುತ್ತಿದ್ದಳು. ಉಪನ್ಯಾಸ ಮುಗಿದು ಮನೆಗೆ ಹಿಂತಿರುಗಿದ ಮೇಲೆ ಅವಳು ಸ್ವಾಮೀಜೀ ಮಾತನ್ನೇ ಪಟ್ಟಾಗಿ ಹಿಡಿದು, ''ಗೀತೆ ಬೇಕಾದ್ರೆ ಕಲೀತೇನೆ. ಬೇರೆ ಯಾವುದನ್ನೂ ಕಲಿ ಅಂತ ಬಲವಂತ ಮಾಡಬೇಡ ಅಂತ ಖಡಾಖಂಡಿತವಾಗಿ ಹೇಳಿಬಿಟ್ಟಿದ್ದಾಳೆ. ನಾನೇನು ಮಾಡಲಿ'' ಅಂತ ಕೇಳಿದ್ದಾರೆ ಮಾನ್ಯ ರಘುರಾಮರೆಡ್ಡಿಯವರು. ಅವರಿಗೆ ಏನು ಉತ್ತರ ಬರೆಯೋದು ಅನ್ನೋದೇ ತೋಚ್ತಾ ಇಲ್ಲ. Any Ideas?

ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

ಉತ್ತಮ ಹಾಸ್ಯ ಸಾಹಿತ್ಯವು, ಮುಖ್ಯವಾಹಿನಿಯ ಉತ್ತಮ ಸಾಹಿತ್ಯದ ಎಲ್ಲ ಲಕ್ಷಣಗಳನ್ನೂ ಒಳಗೊಂಡಿರುತ್ತದೆ. ಮಾದರಿಗೆಂದು ಕಾಯ್ಕಿಣಿಯವರ ಕತೆಯೊಂದನ್ನು ನೋಡಬಹುದು.

ಕನ್ನಡದ ಇತ್ತೀಚಿನ ಸಣ್ಣ ಕತೆಗಾರರಲ್ಲಿ ಜಯಂತ ಕಾಯ್ಕಿಣಿಯವರು ಸಿದ್ಧ ಹಸ್ತರೆಂದು ಹೆಸರಾದವರು. ಆದರೂ ಅವರು ಹಾಸ್ಯಕ್ಕೆ ಹೆದರಿಕೊಂಡವರಲ್ಲ! ಗೊರೂರರಂತೆ, ಮೂರ್ತಿರಾಯರಂತೆ ಜಯಂತ ಕಾಯ್ಕಿಣಿಯವರೂ ಶ್ರೇಷ್ಠ ಹಾಸ್ಯಸಾಹಿತ್ಯವೂ, ಮುಖ್ಯವಾಹಿನಿಯ ಶ್ರೇಷ್ಠ ಸೃಜನಶೀಲ ಸಾಹಿತ್ಯದ - ಕೇವಲ ಒಂದು ಉಪ ವಿಭಾಗವಾಗದೇ - ಸಮ್ಮಿಳಿತ ಪ್ರಮುಖ ಭಾಗವೇ ಆಗಬಹುದೆಂದು ಸಿದ್ಧಪಡಿಸಿದವರು.

ಅವರ 'ದಗಡೂ ಪರಬನ ಅಶ್ವಮೇಧ' ಅಂತಹ ಒಂದು ಕತೆ. ಕತೆಯ ಮೊದಲಿನೆರಡು ಪ್ಯಾರಾಗಳಲ್ಲಿ ಬರುವ ಮದುವೆಯ ಮೆರವಣಿಗೆಯ ಚಿತ್ರಗಳು, ಆರ್.ಕೆ. ಲಕ್ಷ್ಮಣರ 'ಥಟ್ಟಿ ಅಬುಜಿಥ ಜಿರಿ'ನ್ನು ನೆನಪಿಗೆ ತಂದರೆ, ನಂತರದ ಓಟ - ಅಕ್ಷರಶಃ ಕುದುರೆಯ ದಿಕ್ಕೆಟ್ಟ ಓಟ - ವಾಲ್ಟ್ ಡಿಸ್ನಿಯ ಮಿಕ್ಕೀ ಮೌಸಿನಂತೆ 'ಜೂಟ್' ಆಟಕ್ಕೆ ಓದುಗನನ್ನು ಕೆಣಕುತ್ತವೆ.

ಈ ಓಟದ ನಡುವೆಯೇ ''ಅಣ್ಣ ಬಾಲಚಂದ್ರ ಪರಬನ ಹೆಂಡತಿ ಮತ್ಸರದಿಂದ ಹೇ-ಹೇ-ಹೇ ಎಂದು ನಕ್ಕದ್ದು''... ''ಕಿರಾಣಿ ಅಂಗಡಿಯಲ್ಲಿ ಪೊಟ್ಟಣ ಕಟ್ಟುವ ಹುಡುಗ ರಾವುತ ಗುಲಾಮ ಹಾಗೂ ಭಾನುಮತಿಯ ಪ್ರೇಮ ಪ್ರಕರಣ''.... 'ಕಿರಿಯ ಸೋದರ ದಗಡನ ಶೋಧಕ್ಕೆಂದು ಆಟೋರಿಕ್ಷಾದಲ್ಲಿ ವಿಶ್ವಪ್ರದಕ್ಷಿಣೆಗೇ ಹೊರಟು ರಿಕ್ಷಾದ ಮೀಟರು ಹದಿನಾರು ರೂಪಾಯಿ ತೋರಿಸುತ್ತಲೂ ಕಂಗೆಟ್ಟು ಅಸಹಾಯನಾಗಿ ಆಟೋ ನಿಲ್ಲಿಸಿದ ಅಣ್ಣ ಬಾಲಚಂದ್ರ' ... 'ಮಹಾನಗರಿ ಮುಂಬಯಿಯಲ್ಲಿ ದಗಡೂನ ನೀರಸ, ನಿರ್ಜೀವ ಮಿಲ್ಲಿನ ನೌಕರಿ'.... 'ಎಷ್ಟೇ ವಾತ್ಸಲ್ಯದಿಂದ ಕೂಡಿದ್ದರೂ ಸಹಿಸಲಾಗದ ಅಣ್ಣನ ದಾದಾಗಿರಿ'... 'ಗೊರಟು ಹಲ್ಲಿನ ತನ್ನ ಮದುವಣಗಿತ್ತಿ'... 'ಜುಹೂ ಸಮುದ್ರ ತೀರದಲ್ಲಿ ತನ್ನ ಪ್ರೀತಿಯ ತಮ್ಮ ದಗಡೂನಿಗಾಗಿ ಕಾತರದಿಂದ ಹುಡುಕುವ ಬಾಲಚಂದ್ರ ಪರಬ' ಈ ಎಲ್ಲ ಚಿತ್ರಗಳು ದಗಡು ಪರಬನನ್ನು ಕನ್ನಡ ಸಾಹಿತ್ಯದ ಒಬ್ಬ ಚಿರಸ್ಥಾಯಿ ತಮ್ಮನನ್ನಾಗಿಸಿವೆ.

ವಿನೋದದ, ವ್ಯಂಗ್ಯದ, ಹಾಸ್ಯದ ನೂಕುನುಗ್ಗಲುಗಳ ನಡುವೆಯೇ ಯಾಂತ್ರಿಕ ಮುಂಬಯಿಯ, ಕೆಳವರ್ಗದ ಜನರ ಅಸಹಾಯ ಆದರೆ ವಾತ್ಸಲ್ಯಮಯ, ಕೌಟುಂಬಿಕ ಜೀವನ ಚಿತ್ರಣ ನುಸುಳಿಕೊಂಡು ಬಂದು ಓದುಗರ ಒಳ ಮನಸ್ಸನ್ನು ತಟ್ಟುತ್ತಲೇ ಇರುತ್ತದೆ.

- ಶ್ರೀನಿವಾಸ ವೈದ್ಯ

ದಗಡೂ ಪರಬನ ಅಶ್ವಮೇಧ

- ಜಯಂತ ಕಾಯ್ಕಿಣಿ

ಮುಲುಂದಿನ ಲಾಲಬಹದ್ದೂರ ಶಾಸ್ತ್ರಿ ರಸ್ತೆಯಿಂದ ಸ್ಟೇಷನ್ನಿನೆಡೆಗೆ ಮೆಲ್ಲಗೆ ಹೊರಳಿದ ಆ ಮದುವೆಯ ಮೆರವಣಿಗೆ ಈಗ ಮುಖ್ಯ ಬಜಾರಿನ ರಸ್ತೆಯಲ್ಲಿ ನಡೆಯತೊಡಗಿತು. ಅತೀ ಮುಂದೆ ಜರತಾರಿ ಜಗದ್ಗುರುಗಳಂತೆ ನಡೆಯುತ್ತಿರುವ ಬ್ಯಾಂಡಿನವರು, ಹಿಂದೆ ಹೊಳಪು ಮೀಸೆಯ ಪದಿಪರೆಯದ ಪೋರರು. ಹಿಂದೆ ಟೀ ಶರ್ಟನಲ್ಲಿ ಹೊಟ್ಟೆಗಳನ್ನು ಬಿಗಿದುಕೊಂಡು ಅಭಿಮಾನದಿಂದ ಬಜಾರನ್ನೂ ನಡುನಡುವೆ ಹಿಂದಿರುವ ತಮ್ಮ ಹೆಂಡಂದಿರನ್ನೂ ಗಮನಿಸುತ್ತ ನಡೆದ ಮಧ್ಯಮ ವಯಸ್ಸಿನ ಗಂಡಸರು, ನಂತರ ಕುಡಿಸಿಕೊಂಡು ಕುಣಿಸಿಕೊಳ್ಳುತ್ತಿರುವ ಗುಲಾಲು ಬಡಿದುಕೊಂಡ ಚಿತ್ರ ವಿಚಿತ್ರ ಮಂದಿ. ಎಲ್ಲಕ್ಕೂ ಹಿಂದೆ ಬ್ರೇಕ್ ವ್ಯಾನಿನಂತೆ ನಡೆಯುತ್ತಿರುವ ಹೆಂಗಸರ ಗುಂಪು. ಇವೆಲ್ಲವುಗಳ ನಡುವೆ ನಸು ಕಂದು ಬಣ್ಣದ ಉಪಾಕಿ ಕಾಣುವ ಕುದುರೆಯ ಮೇಲೆ ಆ ಕುದುರೆಯದೇ ಬೆನ್ನೆಲುಬಿನ ಭಾಗವೋ ಎಂಬಂತೆ ಕೂತಿದ್ದ ಅವಕುಂಠಿತ ಮದುಮಗ. ಅವನ ಜರಿ ಪೇಟದಿಂದ ಇಳಿಬಿದ್ದ ಮಲ್ಲಿಗೆ ಹಾರಗಳು ಅವನ ಮುಖ ಮುಚ್ಚಿದ್ದವು. ಪೇಟದ ಮೇಲಿನ ಗರಿಯೊಂದು ಇನ್ನೇನು ಬೀಳಬೇಕು ಅನ್ನುವಂತಿತ್ತು. ಮೆರವಣಿಗೆಯಲ್ಲಿ ಯಾರಿಗೂ ಮದುಮಗ ದಗಡೂ ಪರಬ್‌ನ ಮುಖವೇ ನೆನಪಾಗುತ್ತಿರಲಿಲ್ಲ. ಕುದುರೆಯ ತುಸು ಮುಂದೆ ಬಲಭಾಗದಲ್ಲಿ ರಾಷ್ಟ್ರಪತಿಯಂತೆ ನಡೆಯುತ್ತಿರುವವನೇ ಬಾಲಚಂದ್ರ ಪರಬ್ - ಮದುಮಗನ ಅಣ್ಣ - ಮದುವೆಗೆ ಕುದುರೆ ಮೆರವಣಿಗೆಯ ಆಕರ್ಷಣೆಯನ್ನು ನಿಯೋಜಿಸಿದವನು - ಸ್ವತಃ ಆಗ್ರಹಪಡಿಸಿ ಹೆಣ್ಣಿನವರಿಗೆ ಹೇಳಿ ಕುದುರೆಯನ್ನು ತಾನೇ ಅಲೆದಾಡಿ ಗೊತ್ತುಮಾಡಿಸಿ ಮನೆಯಿಂದ ಹಿಡಿದು ಹೆಣ್ಣಿನವರ ಚಾಳಿನಲ್ಲಿ ಹಾಕಿದ ಮಂಟಪದವರೆಗಿನ ಮೆರವಣಿಗೆಯ ಉಸ್ತುವಾರಿ ವಹಿಸಿದವನು. ಹೀಗಾಗಿ ಆಗಾಗ ಬಜಾರಿನ ಮಂದಿಯನ್ನೂ ಮತ್ತು ಕುದುರೆಯ ಮೇಲಿನ ತಮ್ಮನನ್ನು ಗಮನಿಸುತ್ತ ನಡೆಯುತ್ತಿದ್ದನು. ತಮ್ಮ ಚಾಳಿನಲ್ಲಿ ಮೊಟ್ಟಮೊದಲು ಬಾರಿ ಕುದುರೆ ಮೆರವಣಿಗೆ ಆಗುತ್ತಿರುವದು ತನ್ನಿಂದಲೇ ಎಂಬುದನ್ನು ಎಲ್ಲರಿಗೂ ಹೇಳುವಂತಿತ್ತು ಅವನ ನೋಟ.

ಬಜಾರಿನಲ್ಲಿ ನಡೆದ ಮೆರವಣಿಗೆ ಶಿವಾಜಿ ಪುತ್ಥಳಿಯ ಸಮೀಪ ಬರುತ್ತಿತ್ತು. ಇನ್ನೇನು ಅದು ಶಿವಾಜಿ ಪುತ್ಥಳಿಯನ್ನು ಹಾಯಬೇಕು ಅಷ್ಟರಲ್ಲಿ - ಅಲ್ಲೇ

ಬದಿಯಲ್ಲಿದ್ದ ಗರಾಜಿನಲ್ಲಿ ಕಂಗೆಟ್ಟ ಮೋಟಾರ್ ಸೈಕಲ್ಲೊಂದು ಒದೆ ತಿಂದಿದ್ದೇ ಕಿಟಾರನೆ ಕಿರುಚಿಕೊಂಡಿತು. ಒಮ್ಮೆಗೇ ಘಟಿಸಿದ ಈ ಗಗನಭೇದಿ ಸದ್ದಿಗೆ ಒಂದು ಕ್ಷಣ ಬಜಾರಿಗೆ ಬಜಾರೇ ಪ್ಯ ತೆಗೆಯಿತು. ಮತ್ತು ಕಣ್ಣು ಮಿಟುಕಿಸುವದರೊಳಗೆ ಮೆರವಣಿಗೆಯ ಮಧ್ಯದಿಂದ ಅಶ್ವ ವರಸಮೇತ ಓಡಿಹೋಯಿತು.

ಒಂದು ಕ್ಷಣ ಅಶ್ವ ಮುಂಗಾಲುಗಳನ್ನೆತ್ತಿ ಕೆನೆದದ್ದು, ವರನೂ ವಿಚಿತ್ರ ಆವಾಜಿನಲ್ಲಿ ಒದರಿಕೊಂಡಿದ್ದು ಮತ್ತು ಆ ಬದಿಗೆ ಬೀಳಲೋ ಈ ಬದಿಗೆ ಬೀಳಲೋ ಎಂಬಂಥ ಸಂದೇಹದಲ್ಲಿ ಓಲಾಡಿದ್ದು ಮತ್ತು ಮಿಂಚಿನಂತೆ ಕುದುರೆ ವರನನ್ನು ಹೊತ್ತುಕೊಂಡೇ ಮಾಯವಾದದ್ದು - ಇವೆಲ್ಲ ಜರುಗಿದ ಅವಾಕ್ಕು ಕ್ಷಣಗಳ ನಂತರ ತಕೋ ಹಾಹಾಕಾರ ಶುರುವಾಯಿತು. ಕಣ್ಣಿಗೆ ಬಿದ್ದ ಬೀದಿಗಳಲ್ಲಿ ಮೆರವಣಿಗೆಯ ಮಂದಿ ನುಗ್ಗಿದರು. ಬಾಲಚಂದ್ರ ಪರಬ್ ಆಘಾತದಿಂದ ಚೇತರಿಸಿಕೊಳ್ಳುತ್ತಲೆ ಪೆಪೆಪೆಪೆ ತಡವರಿಸುತ್ತ ಇಡೀ ಮೆರವಣಿಗೆಯನ್ನುದ್ದೇಶಿಸಿ ಏನೋ ಹೇಳಿದಂತೆ ಮಾಡಿ ಎಡಬದಿಯ ತರಕಾರಿ ಮಾರ್ಕೆಟ್ಟಿನಲ್ಲಿ ರಭಸದಿಂದ ನುಗ್ಗಿದ. ಮಂದಿ ಕೈಚೀಲ - ಚಿಲ್ಲರೆ - ತರಕಾರಿಗಳ ನಡುವೆ ಮಗ್ನರಾಗಿದ್ದರು. ಕುದುರೆ ಹಾದುಹೋದದ್ದರ ಫರಕೇ ಅವರಿಗಿದ್ದಂತಿರಲಿಲ್ಲ. ಬಾಲಚಂದ್ರ ಪರಬ ಸರಕ್ಕನೆ ಏನೋ ಹೊಳೆದವನಂತೆ ಮರಳಿ ಓಡುತ್ತ ಶಿವಾಜಿ ಪುತ್ಥಳಿಯ ಸಮೀಪ ಬಂದು ಅಲ್ಲೇ ನಿಂತಿದ್ದ ಹೆಂಗಸರನ್ನು ಅಳಿದುಳಿದ ಬ್ಯಾಂಡಿನವರನ್ನು - ಅಲ್ಲೇ ನಿಲ್ಲಲು ಹೇಳಿದ. ರಸ್ತೆ ನಡುವೆಯೇ ನಿಲ್ಲುವದು ಅವಶ್ಯವಾದದ್ದರಿಂದ ಹೆಂಗಸರು ಬದಿಗೆ ಸರಿದರು. ಆದರೆ ಅದು ಹಣ್ಣಿನಂಗಡಿಯನ್ನು ಸುತ್ತುವರಿದಿದ್ದರಿಂದ ಅಂಗಡಿಯವ ಬೊಬ್ಬೆ ಹಾಕಿ ಅವರನ್ನು ಮತ್ತೆ ರಸ್ತೆಯುದ್ದಕ್ಕೂ ಅಟ್ಟಿಬಿಟ್ಟ.

ಈ ಘಟನೆ ನಡೆಯುವಾಗ ಹೆಂಗಸರ ನಡುವೆ ಹೇ ಹೇ ಹೇ ಎಂದು ನಕ್ಕುಬಿಟ್ಟವಳೇ ಬಾಲಚಂದ್ರ ಪರಬನ ಹೆಂಡತಿ. ತಮ್ಮ ಮದುವೆಯಲ್ಲಿ ತನ್ನ ಅಪ್ಪ ಕುದುರೆ ತರಲಿಲ್ಲ ಎಂಬ ಸತ್ಯವನ್ನು ಚುಚ್ಚಿ ಹೇಳುವುದಕ್ಕೇ ಗಂಡ ಈ ಕುದುರೆ ಬೃಹತ್ ಯೋಜನೆಯನ್ನು ಜಿದ್ದಿನಿಂದ ಕೈಗೊಂಡಿದ್ದ ಎಂಬುದು ಅವಳಿಗೆ ಗೊತ್ತಿತ್ತು. ಅಂತೆಯೇ ನಕ್ಕು ಸುಮ್ಮನಾದಳು. ಪರಬ್ ಮಾತ್ರ ಪೂರಾ ಗೊಂದಲದಲ್ಲಿದ್ದ. ''ದಗಡೂ... ದಗಡೂ...'' ಎಂದು ಬಡಬಡಿಸುತ್ತಲೇ ತರಕಾರಿ ಮಾರ್ಕೆಟ್ಟು ಮುಗಿಸಿ - ಗೋಶಾಲಾ ರೋಡು ತಲುಪಿದ, ಎದುರಿಗಿರುವ ಘೋರ ಪ್ರಶ್ನೆ ಕುದುರೆಯನ್ನು ಎಲ್ಲಿ ಹುಡುಕುವದು. ಸಿಕ್ಕರೆ ದಗಡೂ ಅದರ ಮೇಲೆ ಇನ್ನೂ ಇರಬಹುದೆ? ಅಥವಾ ದಗಡೂನನ್ನೇ ಹುಡುಕುವದೆ? ಇತ್ತ ಬೇರೆ ಬೇರೆ ಹಾದಿಗಳಲ್ಲಿ ಅರಸಲು ನುಗ್ಗಿದ ಸ್ವಯಂ ಸೇವಕರು - ರಸ್ತೆ ಬದಿಯನ್ನೇ

ಹುಡುಕಿದರು - ದಗಡೂ ಬಿದ್ದಿರಬಹುದೆಂದು ಗೋಶಾಲಾ ರೋಡಿನಲ್ಲಿ ಶಾಲೆಯೊಂದು ಬಿಟ್ಟು ಮಕ್ಕಳು ಬೀದಿ ಪಾಲಾಗಿದ್ದರು. ಬಾಲಚಂದ್ರ ಅವರನ್ನು ನಿಲ್ಲಿಸಿ "ಈ ದಾರಿಯಲ್ಲಿ ಕುದುರೆ ಹಾದು ಹೋದದ್ದನ್ನು ನೋಡಿದ್ದೀರಾ?" ಎಂದು ಕೇಳಿದ. ಮತ್ತೂ ಮುಂದೆ ಬಸ್ ಸ್ಟಾಪಿನಲ್ಲಿ ಕಾದಿದ್ದ ಕೆಲವರಲ್ಲಿ ಇದೇ ಪ್ರಶ್ನೆ ಮತ್ತೆ ಕೇಳುವಾಗ ಪರಬನಿಗೆ ತೀರ ಬೇಸರವಾಗಿ ಹೋಯಿತು. ಮತ್ತು ಇದೇ ಕ್ಷಣಕ್ಕೆ ಕುದುರೆಯನ್ನು ತಂದ ರಾವುತ ಗುಲಾಮನೆಲ್ಲಿ? - ಎಂಬ ಪ್ರಶ್ನೆ ಅವನೆದುರು ಬಂತು. ಇರಲಿ ಅವನೂ ಕುದುರೆಯನ್ನು ಹುಡುಕುತ್ತ ಹೋಗಿರಬೇಕು. ಎಲ್ಲರಿಗಿಂತ ಜಾಸ್ತಿ ಕುದುರೆಯ ಫಿಕಿರು ಅವನಿಗೇ ಇರಬೇಕಲ್ಲ. ನಾನು ಮಾತ್ರ ಈಗ ತಮ್ಮ ದಗಡೂನನ್ನೇ ಹುಡುಕುವದು ಎಂದು ಖಚಿತ ಮಾಡಿಕೊಂಡು ರಿಕ್ಷಾ ಒಂದನ್ನು ಕರೆದು ಅದರಲ್ಲಿ ಕೂತು ರಸ್ತೆಗಲ್ಲಿಗಳನ್ನು ಅಲೆಯಲು ಆರಂಭಿಸಿದ. ಇಲ್ಲಿ ನಿಲ್ಲಿಸು. ಅಲ್ಲಿ ನಿಲ್ಲಿಸು ಎಂದು ಪದೇ ಪದೇ ನಿಲ್ಲಿಸುತ್ತಿದ್ದ. ದೂರದಲ್ಲಿ ಬುಟ್ಟಿಗಳು ಕೂಡ ಕುದುರೆಯಂತೆ ಕಾಣುತ್ತ ರಸ್ತೇ ಬದಿಯಲ್ಲಿ ಎಲ್ಲೋ ದಗಡೂನನ್ನು ಕಂಡಂತೆ ಆಗುತ್ತ ಕಂಗೆಟ್ಟು ಹದಿನಾರು ರೂಪಾಯಿಗೆ ಮೀಟರು ಬರುತ್ತಲೇ ನಿಲ್ಲಿಸಿಬಿಟ್ಟ. ಈಗ ಅವನು ಉಪನಗರದಿಂದ ತೀರ ದೂರವಿದ್ದ - ಒಂದು ಆಟದ ಬಯಲಿನ ಸಮೀಪ.

ಕುದುರೆಯನ್ನು ತಂದ ಹುಡುಗ ಗುಲಾಮ ಮಾತ್ರ ಎಲ್ಲ ಗೊಂದದಲ್ಲಿ ಯಾರ ಕಣ್ಣಿಗೆ ಬೀಳದೆ ಮಾಯವಾಗಿದ್ದ. ಕುದುರೆ ಕೆನೆದು ಮಾಯವಾಗಿದ್ದೇ - ಗುಲಾಮ ಓಡುತ್ತ ಸ್ಟೇಷನ್ನಿಗೆ ಬಂದು ರೈಲಿನಲ್ಲಿ ಕೂತು ವಿ.ಟಿ.ಗೆ ಹೊರಟುಬಿಟ್ಟ. ಆ ಕುದುರೆ ಅವನದಾಗಿರಲಿಲ್ಲ. ಅದು ಅವನು ಗುಟ್ಟಾಗಿ ಮೋಹಿಸಿ ಮನದಲ್ಲೇ ಕಾಮಿಸಿ ವಿಲಿ ವಿಲಿ ಒದ್ದಾಡಿದ ಭಾನುಮತಿಯ ಅಪ್ಪನದು. ಗುಲಾಮ ಕೆಲಸ ಮಾಡುತ್ತಿದ್ದದ್ದು ಕಲವಾದಲ್ಲಿಯ ಕಿರಾಣಿ ಅಂಗಡಿಯೊಂದರಲ್ಲಿ. ಪೊಟ್ಟಣ ಕಟ್ಟುತ್ತಿರುವಾಗಲೇ ಒಮ್ಮೆ ಅವನ ಕಣ್ಣಿಗೆ ಬಿದ್ದಳು ಎದುರಿನ ಲಾಯದಂತಿರುವ ಮನೆಯೊಂದರಲ್ಲಿ ಆ ಹುಡುಗಿ. ಅವಳ ತೋಳುಗಳು ಅವನನ್ನು ಆಕರ್ಷಿಸುತ್ತಿದ್ದವು. ಆ ತೋಳುಗಳನ್ನು ಬೀಸಿ ಬಳಸಿ ಕಂಕುಳನ್ನು ಗುಟ್ಟಾಗಿ ಅಡಗಿಸಿ ಅವಳು ಬಟ್ಟೆ ಒಣ ಹಾಕುವುದನ್ನು ನೋಡುತ್ತ ಗುಲಾಮ ಗುಲಾಮನಾದ. ಭಾನುಮತಿಯ ಅಪ್ಪನದು ಕುದುರೆಗಳದೇ ದಂಧೆ. ಬಹಳ ಹಿಂದೆ ಟಾಂಗಾವಾಲಾ ಇದ್ದನಂತೆ. ಈಗ ನಾಲ್ಕೈದು ಟಾಂಗಾ ಇಟ್ಟಿದ್ದಾನೆ. ರಜೆಯ ಸೀಸನ್ನಿನಲ್ಲಿ ಕುದುರೆಗಳನ್ನು ಟಾಂಗಾಗಳನ್ನು ಜುಹೂ ಸಮುದ್ರ ತೀರಕ್ಕೆ ಮಕ್ಕಳ ಸವಾರಿ ಬಾಡಿಗೆಗೆಂದು ಕಳಿಸುತ್ತಾನೆ. ಬರೇ ಟಾಂಗಾ, ಲದ್ದಿ, ಕುದುರೆ ಬಾಲ, ಮೇವು

ಹುರಳಿಗಳ ಕೊಟ್ಟಿಗೆಯಂತಿರುವ ಆ ಮನೆಯಲ್ಲಿ ಪುಲಿಯಂತೆ ಉಬ್ಬುತ್ತ ಹಂಸದಂತೆ ಕಂಡು ನಕ್ಕು ಮಾಯವಾಗುವ ಭಾನುಮತಿಯ ಕಣ್ಣಿಗೂ ಗುಲಾಮು ಬೀಳತೊಡಗಿದ. ತನ್ನ ಕಣ್ಣಿನಲ್ಲೇ ಅವನನ್ನು ಅವಳು ಆಡಿಸತೊಡಗಿದಳು. ಒಂದು ದಿನ ಏನಾಯಿತೋ, ರಾಜಾರೋಷದಿಂದ ನಡೆದುಹೋಗಿ ಗುಲಾಮು ಅವಳಪ್ಪನ ಎದುರು ನಿಂತು ಅವಳು ಕೈ ಬೇಡಿದ. ಅವಳಪ್ಪ ಇದಕ್ಕೆ ಬದಲಾಗಿ ರಪಾಲನೆ ತನ್ನ ಕೈಕೊಟ್ಟ. ಅಪಮಾನದಿಂದ ಗುಲಾಮು ಸತ್ತೇ ಹೋದ. ಆದರೂ ಪ್ರೇಮದ ಗೆಲುವಿನ ಕುರಿತು ಹಿಂದಿ ಸಿನೆಮಾಗಳಿಂದ ಅಚಲ ಶ್ರದ್ಧೆ ಪಡೆದದ್ದವನಾದ್ದರಿಂದ ಪೊಟ್ಟಣ ಕಟ್ಟುತ್ತಲೇ ಬಿಳಿಯ ತೋಳುಗಳ ಕಡೆ ನೋಡುವ ತನ್ನ ಕಾಯಕ ನಿಲ್ಲಿಸಲಿಲ್ಲ. ಯಾಕೋ ವಿಚಿತ್ರ ಛಲದ ಸಿಟ್ಟಿನಿಂದ ಪ್ರೇಮದ ನೋಟವನ್ನು ಬಿಡಲಾರಂಭಿಸಿದ. ಟಾಂಗಾವಾಲರ ದೋಸ್ತಿ ಮಾಡಿದ. ಸಾಮಾನಿಗೆ ಬಂದವರಲ್ಲಿ ಎಳೆ ಹುಡುಗಿಯರಿದ್ದರೆ ತಡವಾಗಿ ಸಾಮಾನು ಕೊಡುತ್ತ ಅವರೊಡನೆ ಲಲ್ಲೆಗರೆಯುತ್ತ ಭಾನುಮತಿಯ ಲಕ್ಷ್ಯವನ್ನು ಕೆರಳಿಸುವ ಪ್ರಯತ್ನವನ್ನೂ ಮಾಡಿದ. ಅವನ ಈ ನಾಟಕ ಅತಿಯಾದ ಮೇಲೆ ಒಂದು ದಿನದಿಂದ ಭಾನುಮತಿ ಇವನ ಕಡೆ ನೋಡುವದನ್ನೂ ಬಿಟ್ಟುಕೊಟ್ಟಳು. ಆಗ ಬೇಜಾರೋ ಸಿಟ್ಟೋ ತಿಳಿಯದೆ ಅಂಗಡಿಯಲ್ಲಿ ಕೂರದೆ ಎದುರಿನ ಟಾಂಗಾವಾಲನ ದೋಸ್ತಿಯಿಂದ ಠಾಣಾದ ಟಾಂಗಾ ಸ್ಟ್ಯಾಂಡಿನಲ್ಲಿ ಕಾಡು ಹರಟೆ ಮಾಡುತ್ತ ವೇಳೆ ಕಳೆಯತೊಡಗಿದ. ಇವನ ಇಂಥ ಒಂದು ಕಾಡು ಹರಟೆಯನ ನಡುವೆಯೇ - ಬಾಲಚಂದ್ರ ಪರಬ್ ಮದುವೆ ಸವಾರಿಗೆ ಕುದುರೆ ಬೇಕು ಎಂದು ಚೌಕಾಶಿ ಮಾಡಿದ. ಗುಲಾಮನಿಗೆ ವಿಚಿತ್ರ ಸಾಹಸ ಬಂತು. ''ದುಡ್ಡು ಕೈಲಾದ್ದು ಕೊಡಿ. ನಾಳೆ ನಸುಕಿಗೇ ಕುದುರೆ ತರುತ್ತೇನೆ. ಅಲಂಕಾರ ವಗೈರೆ ಮಾತ್ರ ಆಗಲಿಕ್ಕಿಲ್ಲ'' - ಎಂದು ವಾಗ್ದಾನ ಮಾಡಿದ. ಮರುದಿನ ನಟ್ಟ ನಸುಕಿನಲ್ಲಿ ಎದ್ದು ಭಾನುಮತಿಯ ಅಪ್ಪನ ಲಾಯದಲ್ಲಿಯ ಟಾಂಗಾದ ಕುದುರೆಯೊಂದನ್ನು ಬಿಡಿಸಿಕೊಂಡು ನಡೆಸಿಕೊಂಡೇ ಕುಲುಂದಿನಲ್ಲಿ ಪರಬನ ಖೋಲಿಯೆದುರು ಹಾಜರಾದ. ಪರಬನ ಚಾಳಿನವರೆಲ್ಲ ಸ್ಫೂರ್ತಿಯಿಂದ ಕುದುರೆ ಸಿಂಗರಿಸಲು ಬಂದವರು ಕುದುರೆಯ ಸಿಡಿಮಿಡಿಯನ್ನು ನೋಡಿ ಹಿಂಜರಿದರು. ಕೊನೆಗೂ ಸಿಂಗಾರ ಮಾಡಲಾಗದೆ, ಸಿಂಗರಿಸಿದ ಮದುಮಗನನ್ನೇ ಸ್ಟೂಲಿಟ್ಟು ಏರಿಸಲಾಯಿತು. ಸಿನೇಮಾ ಪೋಸ್ಟರುಗಳಿಂದ ಸೀದ ಜಿಗಿದು ಮನೆಯೆದುರು ಬಂದಂತಿದ್ದ ಕುದುರೆ ನೋಡೇ ಹೆದರಿದ ದಗಡೂ ಪರಬ್-ತಾನು ಮದುಮಗನೆಂಬುದನ್ನೇ ಮರೆತು ಕಂಗೆಟ್ಟ. ಕುದುರೆ ತುಸು ತಲೆ ಕೊಸರಿದರೂ ಸಾಕು - ಮುಗಿಯಿತು ತನ್ನ ಅವತಾರ ಅನಿಸುತ್ತಿತ್ತು ಅವನಿಗೆ. ಮೆರವಣಿಗೆ

ಶುರುವಾಗುವಷ್ಟರಲ್ಲಿ ಬೆವರು ಬಿಟ್ಟು ಯಾಕಪ್ಪಾ ಈ ಅಣ್ಣನಿಗೆ ತಮ್ಮನಹಾಗಿ ಹುಟ್ಟಿದೆ ಎಂದೆನಿಸಿತು. ಮೆರವಣಿಗೆಯ ಬ್ಯಾಂಡು ಶುರುವಾದದ್ದೇ ಕುದುರೆ ಸಣ್ಣಗೆ ಜಿಗಿದಂತೆ ಮಾಡಿ - ದಗಡೂನ ಪೃಷ್ಠಕ್ಕೆ ಬಲವಾದ ಪೆಟ್ಟು ಬಂತು. ನೋವನ್ನು ಅರಗಿಸಿಕೊಳ್ಳಲು ತುಸು ಕುಂಡೆ ಜರುಗಿಸಿದ್ದೇ ಮತ್ತೊಮ್ಮೆ ಅಲ್ಲೇ ಪೆಟ್ಟು ತಿಂದು ನರ ಜನ್ಮವನ್ನೇ ಕುರಿತು ದಗಡು ಪರಿತಪಿಸಿದ. ಇದೆಲ್ಲದಕ್ಕೂ ನಿರ್ವಿಕಾರವಾಗಿಯೇ ನಡೆದಿದ್ದ ಗುಲಾಮ.

ಆದಷ್ಟು ಬೇಗ ಕುದುರೆಯ ಸನಿಯದಿಂದ ಇಲ್ಲವಾಗುವ ಹವಣಿಕೆಯಲ್ಲಿದ್ದ. ಆದರೂ ಮದುವೆ ಅಂದ ಮೇಲೆ ವಯಸ್ಸಿಗೆ ಮೀರಿದ ಕುಪ್ಪಸ ತೊಟ್ಟು ಪದೇ ಪದೇ ಅತ್ತರು ಹಚ್ಚಲು ಬರುವ ಚಂದದ ತರಳೆಯರು ಇದ್ದೇ ಇರುತ್ತಾರಲ್ಲ, ಆ ಆಕರ್ಷಣೆಗೆ ಬಲಿಯಾದ ಗುಲಾಮ ಇನ್ನೂ ಮೆರವಣಿಗೆಗೆ ಅಂಟಿಕೊಂಡೇ ಇದ್ದ. ಬಾಲಚಂದ್ರ ಪರಬನಂತೂ ಗುಲಾಮನಿಗಾಗಿ ನಡೆಯುತ್ತಿರುವಾಗಲೇ ಗೋಲ್ಡಸ್ಪಾಟ್ ತರಿಸಿ ಒಡೆಸಿ ಕೊಟ್ಟ. ಶಿವಾಜಿ ಪುತ್ಥಳಿಯ ಸಮೀಪ ಗುಲಾಮನ ಗೋಲ್ಡಸ್ಪಾಟ್ ಮುಗಿಸುವದಕ್ಕೂ ಕುದುರೆಯ ಪಲಾಯನಕ್ಕೂ ಸರಿ ಹೋಯಿತು. ಅತ್ತ ಇತ್ತ ನೋಡದೇ ಸ್ಟೇಷನ್ನಿನೆಡೆ ಓಡಿದವನೇ ವಿ.ಟಿ.ಗೆ ಹೋಗಿ ಸಿನಿಮಾ ನೋಡುವಾ ಎಂದು ರೈಲಿನಲ್ಲಿ ಕೂತುಬಿಟ್ಟ. ಭಾನುಮತಿ ಮತ್ತು ಅವಳಪ್ಪನ ಮನೆ ಹಾಳಾಗಲಿ ಎಂದು ಶಪಿಸುವುದನ್ನು ಮರೆಯಲಿಲ್ಲ.

ಇತ್ತ ಕಲವಾದಲ್ಲಿ ಎಂಟಕ್ಕೆ ಎದ್ದ ಭಾನುಮತಿಯ ಅಪ್ಪ ಸುದ್ದಿ ತಿಳಿದಿದ್ದೇ ಸಿಟ್ಟಿನಿಂದ ಕುಣಿದಾಟಿದ. ತನ್ನ ಟಾಂಗಾಗಳನ್ನು ಕಲವಾ ಠಾಣಾ ಪ್ರದೇಶದಲ್ಲಿ ಕುದುರೆ ಹುಡುಕಲೆಂದೇ ಅಡ್ಡಾಡಿಸಿದ. ಪೋಲೀಸ್ ಸ್ಟೇಷನ್ನಿಗೆ ಹೋಗಿ ಫುಕಾರು ಕೊಟ್ಟ. ಕುದುರೆಯ ಕುರಿತು ವಿವರ ಕೊಡುವಾಗ ಬಣ್ಣ ಏನೆಂದು ತಿಳಿಯದೇ 'ಕುದುರೆಯ ಬಣ್ಣ' ಎಂದ. ಭಾನುಮತಿ ಮೀಯಲು ನಿಂತಳು. ಮೈ ತೊಳೆಯುತ್ತ ತಿಕ್ಕುತ್ತ ಲಲ್ಲಲ್ಲಾ ಎಂದು ಹಾಡಿದಳು. ಬೆಳಗಿನಿಂದಲೇ ಏನೋ ಹುರುಪು ಅವಳಿಗೆ,

ಇತ್ತ ಆಟದ ಬಯಲಿನ ಬದಿಯಲ್ಲಿ ಬಿಸಿಲಲ್ಲಿ ಹೈರಾಣಾಗಿ ನಡೆಯುತ್ತಿದ್ದ ಬಾಲಚಂದ್ರ ಪರಬನನ್ನು ಯಾರೋ ''ಅರೇ-ನೀವಿಲ್ಲಿ? ಇಂದು ನಿಮ್ಮ ತಮ್ಮನ ಮದುವೆ ಇತ್ತಲ್ಲ...'' ಎಂದು ಹೇಳಿ ಪೆಟ್ಟು ತಿನ್ನುವದನ್ನು ಸ್ವಲ್ಪದರಲ್ಲಿ ತಪ್ಪಿಸಿಕೊಂಡರು. ಒಂದು ಕ್ಷಣ ಅವನಿಗೆ ಮದುವೆ ಮಂಟಪ - ಊರು- ತನ್ನ ಚಾಳು ಎಷ್ಟೋ ದೂರ ಇರುವಂತೆ ಅನಿಸಿತು. ಕುದುರೆ ಮತ್ತು ದಗಡೂ ಇದ್ದಿದ್ದರೆ ಇಷ್ಟು ಹೊತ್ತಿಗೆ ಧಾರೆ ನಡೆಯುತ್ತಿತ್ತು ಅನಿಸಿತು. ಕುದುರೆ ಮತ್ತು ದಗಡೂ

ಈಗಾಗಲೇ ಮಂಟಪ ತಲುಪಿ ಎಲ್ಲರೂ ತನ್ನನ್ನು ಅರಸುತ್ತಿರಬಹುದೇ ಎಂದು ಗಲಿಬಿಲಿಯೂ ಆಯಿತು. ಪೋಲೀಸು ಸ್ಟೇಷನ್ನಿಗೆ ಹೋಗುವಾ ಎಂದರೆ ಮಂಟಪದ ಲೈಸನ್ನು, ಸ್ಪೀಕರುಗಳ ಬಳಕೆ, ಪೋಲೀಸರ ಹಪ್ತಾ ಇತ್ಯಾದಿ ಬಲೆಗಳು ಆವನನ್ನು ಕಂಗೆಡಿಸಿದವು. ಕಾಲುಗಳನ್ನು ಎಳೆಯುತ್ತ ಮಧ್ಯಾಹ್ನ ಎರಡರ ಹಾಗೆ ಮಂಟಪ ತಲುಪಿದ. ಮಂಟಪ ಕಾದು ಕಾದು ಹೆಂಗಸರು ಕೂತಲ್ಲೇ ನಿದ್ದೆ ಹೊಡೆಯುತ್ತಿದ್ದರು. ಬ್ಯಾಂಡಿನವರು. ಸ್ಪೀಕರಿನವರು ಅಡಿಗೆ ಕೋಣೆ ಹೊಕ್ಕು ಹೊಕ್ಕು ಹಲ್ಲು ಗಿಂಜುತ್ತ ಹೊರಬರುತ್ತಿದ್ದರು. ಪರಬ್ ಸುಮಾರು ಮೂರು ಗಂಟೆಗೆ ಸರಕ್ಕನೆ ಎದ್ದು ನಿಂತು ಅಳಿದುಳಿದವರನ್ನೆಲ್ಲ ಉದ್ದೇಶಿಸಿ - ''ಎಲ್ಲಾ ದೇವರ ಇಚ್ಛೆ. ಆಗುವದೆಲ್ಲಾ ಆಗುತ್ತದೆ'' - ಎಂದು ಊಟ ಬಡಿಸಲು ಆಜ್ಞಾಪಿಸಿದ. ಹಸಿದ ಎಲ್ಲರಿಗೂ ಊಟ ಭರ್ಜರಿ ಸೇರಿತು. ಊಟದ ಮಧ್ಯೆ ಕುದುರೆ ಬರದಿದ್ದರೆ ಸಾಕು ಅವಸರಪಡಿಸಲು ಎಂದುಕೊಂಡರು ಕೆಲವರು. ಪರಬ್ ಮಾತ್ರ ಹೆಂಡತಿಯ ಒತ್ತಾಯದ ಮೇರೆಗೆ ಅನ್ಯಮನಸ್ಕನಾಗಿ ಜಿಲೇಬಿ ತಿಂದ. ಎರಡೇ ಹಾಡು ಬಾರಿಸಿದ ಬ್ಯಾಂಡಿನವರಿಗೆ ಪೂರಾ ಹಣ ಕೊಡಬೇಕಾದಾಗ ಪರಬನಿಗೆ ಹೃದಯ ಗಂಟಲಿಗೆ ಬಂತು. ಆದರೂ ಸುತ್ತಮುತ್ತ ಜನ ನೋಡುತ್ತಿರುವದನ್ನೂ ಖಾತ್ರಿ ಪಡಿಸಿಕೊಂಡೇ ನೋಟುಗಳನ್ನು ಎಣಿಸಿಕೊಟ್ಟ. ಸ್ಪೀಕರಿನವ ಸಂಜೆಯ ತನಕ ಉಳಿಯಲೋ ಎಂದು ಕೇಳಿದಾಗ - 'ಬೇಕಾದರೆ ಹೋಗು' ಎಂದು ದಬಾಯಿಸಿದ. ನಂತರ ತಾನು ಖುರ್ಚಿಯೊಂದರಲ್ಲಿ ಕೂತು ತೂಕಡಿಸಿದ.

ಶಿವಾಜಿ ಪುತ್ಥಳಿಯ ಬಳಿ ಗರಾಜಿನ ಆ ಸಿದ್ದಗೆ ಕುದುರೆಗೆ ಆದದ್ದೇನು? ಆ ಕುದುರೆ ಈ ಹಿಂದೆ ಕೆಲ ಕಾಲ ಸರ್ಕಸ್ಸಿನಲ್ಲಿತ್ತು. ನಂತರ ಕೆಲ ತಿಂಗಳು ಸಿನಿಮಾ ಶೂಟಿಂಗಿನಲ್ಲೂ ಇತ್ತು. ಕುದುರೆಯ ನೆನಪುಗಳು ಸಾದಾ ಅಂತೂ ಇರಲಿಲ್ಲ. ಮೋಟರ ಸೈಕಲಿನ ಫಟಫಟಿಸುವ ಸದ್ದು-ಕುದುರೆಯಲ್ಲಿ ಸರ್ಕಸ್ಸಿನ ಯಾವ ನೆನಪುಗಳನ್ನು ಎಗರಿಸಿತೋ ಯಾವ ಬಲ್ಲ. ಆ ಕ್ಷಣಕ್ಕೆ ಕುದುರೆ ಮೈ ತೆಗೆದು ಜಿಗಿದು ಮುಂಗಾಲುಗಳನ್ನೆತ್ತಿ ಓಟ ಕಿತ್ತಿತ್ತು. ನಸುಕಿನಿಂದ ಶುರುವಾದ ಇಲ್ಲದ ಉಸಾಬರಿಯಿಂದ ಅದು ಮೊದಲೇ ರೇಗಿ ಹೋಗಿತ್ತು. ಈ ಸದ್ದೇ ಸಾಕಾಯಿತು. ಧಡಕ್ ಧಡಕ್ ಎಂದು ಎಗರುತ್ತ ರಾಜಾಜಿ ತರಕಾರಿ ರಸ್ತೆಯಲ್ಲಿ ಹೊಕ್ಕಿದ ಅದು ಸೆಕೆಂಡುಗಳಲ್ಲಿ ಅದನ್ನು ದಾಟಿ ಅಡ್ಡ ತಿರುಗಿ ಝುವೇರ್ ರಸ್ತೆಯಲ್ಲಿ ಹೊಕ್ಕು ಅಲ್ಲಿಂದ ಗೋಶಾಲಾ ರೋಡಿಗೆ ಹೊರಳಿ ಓಡಿತು. ಅದರ ಬೆನ್ನ ಮೇಲೆ ಬೆಂಡಿನ ಪದಕದಂತೆ ದಗಡೂ ಅಲಗುತ್ತಿದ್ದ. ಕುದುರೆಯ ಕತ್ತನ್ನು ಅದ್ಯಾವ ರೀತಿಯಲ್ಲಿ ಅಪ್ಪಿ ಹಿಡಿದಿದ್ದನೋ ಅದ್ಯಾವ ಶಕ್ತಿಯಿಂದ ಕಣ್ಣು ಮುಚ್ಚಿದ್ದನೋ ಕುದುರೆಯ ಜಿಗಿತದಲ್ಲಿ

ಒಂದಾಗುತ್ತಾ - ಅರೇ ತಾನಿನ್ನೂ ಬಿದ್ದೇ ಇಲ್ಲವಲ್ಲ ಎಂಬ ಅಚ್ಚರಿಯನ್ನೂ ಮರೆತು ವಿಚಿತ್ರವಾಗಿ ಕೆನೆಯತೊಡಗಿದ. ಗೋಶಾಲಾ ರೋಡಿನಲ್ಲಿಯೂ ಯಾವುದೋ ಶಾಲೆಯ ಮಕ್ಕಳು ಹೇ ಎಂದು ಕಿಕ್ಕಿರಿದು ಕೂಗಿದರು. ಅದೂ ಅವನನ್ನೂ ವಿಚಲಿತನಾಗಿಸಲಿಲ್ಲ. ಅವನ ಪೇಟ ಮಾತ್ರ ಅಲ್ಲಿ ಬಿದ್ದುಹೋಯಿತು. ಕೆಲವು ಮಕ್ಕಳು ಅದನ್ನು ಹಿಡಿದು ಕೆಲವು ನಿಮಿಷ ಕುದುರೆಯ ಹಿಂದೇ ಓಡಿದರು. ಆ ರಸ್ತೆಯಿಂದ ಅಡ್ಡ ತಿರುಗಿ ಕುದುರೆ ವಿಶಾಲ ಸೇಂಟ್ ಪೈಸ್ ಆಟದ ಬಯಲಿನ ನಡುವೆ ಹಸುಗಳ ನಡುವಿನಿಂದ ಎರಡು ಮೂರು ಕ್ರಿಕೆಟ್ ಪಿಚ್‌ಗಳ ಮೇಲಿಂದ ಹಾಯುತ್ತ ಸಣ್ಣ ಗೋಡೆಯನ್ನೂ ಹಾರಿ ಪೆಟ್ರೋಲ್ ಬಂಕಿನ ಬದಿಯ ಸಣ್ಣ ಜಾಗದಿಂದ ಆಗ್ರಾ ರಸ್ತೆಯನ್ನು ಸೇರಿ ಧಡೂತಿ ವಾಹನಗಳು, ಟ್ರಕ್ಕುಗಳು, ಡಬಲ್‌ಡೆಕ್ಕರುಗಳ ನಡುವೆ ಓಡತೊಡಗಿತು. ಪೇಟ ಕಳಚಿಬಿದ್ದ ದಗಡೂನನ್ನು ಬಸ್ಸಿನಿಂದ ಜನ ವೀಕ್ಷಿಸಿದರು. ಹೆದ್ದಾರಿಯ ವಾಹನಗಳ ನಡುವೆ ಕುದುರೆ ಈಗ ನೆಗೆಯ ತೊಡಗಿತು. ಈ ಒಂದು ಹಂತದಲ್ಲೇ ದಗಡೂ ಈ ವ್ಯವಹಾರಿಕ ಜಗತ್ತಿನೊಡನೆಯ ತನ್ನ ಕಿಂಚಿತ್ತೂ ಕಾರ್ಯಕಾರಣ ಸಂಬಂಧ ಕಳೆದುಕೊಂಡು, ವಿಲಕ್ಷಣ ಹಗುರತನವನ್ನು ಅನುಭವಿಸುತ್ತ ಕುದುರೆಯೊಡನೆ ಒಂದಾಗಿ ಹೋದ. ತನ್ನ ಮಿಲ್ಲಿನ ನೌಕರಿ, ಅಣ್ಣನ ದಾದಾಗಿರಿ, ಗೊರಟುಹಲ್ಲಿನ ಮದುವಣಗಿತ್ತಿ, ತನ್ನ ಸುಡುಗಾಡು ದಿನಚರಿ ಎಲ್ಲವನ್ನೂ ಒಂದೇ ನೆಗೆತದಲ್ಲಿ ಒದ್ದಂತೆ ಅನಿಸಿ ಗಟ್ಟಿಯಾಗಿ ಕುದುರೆಯ ಕತ್ತನ್ನು ಅವಚಿಕೊಂಡ. ಒಂದು ಕ್ಷಣದಲ್ಲಿ ತಾನೇ ಶಿವಾಜಿಯಾಗಿ ರಾಯಗಡ ಕೋಟೆಯನ್ನು ಹತ್ತುತ್ತಿರುವಂತೆಯೂ ಅವನಿಗೆ ಭ್ರಮೆ ಆಯಿತು. ಕುದುರೆ ರಭಸದಿಂದ ಹೆದ್ದಾರಿಯಗುಂಟ ಓಡುತ್ತಿತ್ತು - ಆಕ್ಟ್ರಾಯ್ ನಾಕೆಯನ್ನು ದಾಟಿ, ಸಿಗ್ನಲ್ಲುಗಳನ್ನು ಹಾರಿಸಿ ಕೇವಲ ತನಗೇ ಗೊತ್ತಿದ್ದಂತಿರುವ ಗುರಿಯ ಕಡೆಗೆ.

ಹೀಗೇ ಎಷ್ಟೋ ಹೊತ್ತು ಓಡಿದ್ದೇ ಹೆದ್ದಾರಿ ಬಿಟ್ಟು ಪರಿಚಿತ ಒಳದಾರಿಗಳನ್ನು ತುಳಿಯುತ್ತ ಉಪನಗರ ಒಂದನ್ನು ಹೊಕ್ಕು-ತೇಕುತ್ತ-ಶ್ವಾಸ ಬಿಡುತ್ತ - ತೀರ ಇಕ್ಕಟ್ಟು ಗಲ್ಲಿಯೊಳಗೆ ನುಸು ಮನೆಯೊಂದರ ಲಾಯದಂಥ ಚಾವಡಿಯಲ್ಲಿ ನಿಂತುಬಿಟ್ಟಿತು. ಆ ಮನೆಯಿಂದ ಆಳುಗಳು ಬಂದು ಸೋತು ಜೋತಿದ್ದ ದಗಡೂನನ್ನು ಇಳಿಸಿಕೊಂಡರು. ಅವನ ಜರತಾರಿಯ ಬಟನ್ನುಗಳನ್ನು ತೆಗೆದು ಗಾಳಿ ಹಾಕಿ ಹಗ್ಗದ ಮಂಚದ ಮೇಲೆ ಒರಗಿಸಿದರು. ಆವನ ತೇಲುಗಣ್ಣುಗಳ ಬಳಿಗೆ ಒಬ್ಬಳು ಹುಡುಗಿ ತಂಬಿಗೆ ತುಂಬ ನೀರು ತಂದು ನಿಂತಳು. ಅವನು ಗಟಗಟಾ ಸದ್ದು ಮಾಡುತ್ತ ನೀರು ಕುಡಿಯುತ್ತಿರುವಾಗಲೇ ಲಲ್ಲಲಾ ಎಂದು ಹಾಡುತ್ತ ಮರೆಯಾದಳು. ಎರಡು

ಮಾತಿಲ್ಲದೆ ಎರಡೇ ನಿಮಿಷದಲ್ಲಿ ಭಾನುಮತಿಯ ಅಪ್ಪ ಕುದುರೆ ಓಡಿಡು ತಂದ ಈ ವೀರ, ಸಿದ್ಧ ಮದುಮಗನನ್ನು ಅಳಿಯನನ್ನಾಗಿ ಸ್ವೀಕರಿಸಿ ಬಿಟ್ಟ.

ಎಷ್ಟೋ ತಿಂಗಳುಗಳ ನಂತರ ಬಾಲಚಂದ್ರ ಪರಬನ ಕಿವಿಯ ಮೇಲೆ ಯಾರೋ ಸುದ್ದಿ ಹಾಕಿದರು - ಜುಹೂ ಸಮುದ್ರತೀರದಲ್ಲಿ ದೊಡ್ಡ ಚಂದ ಟಾಂಗಾದ ಮೇಲೆ ಮಕ್ಕಳನ್ನು ಕೂರಿಸಿಕೊಂಡು ದಗಡೂ ಬಾಡಿಗೆಗೆ ಹೊಡೆಯುತ್ತಿದ್ದಾನೆ ಎಂದು. ಅದೇ ದಿನ ಸಂಜೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಒಂದು ರೈಲು ಎರಡು ಬಸ್ಸುಗಳನ್ನು ಬದಲಿಸಿ ಬಾಲಚಂದ್ರ ಪರಬ್ ಜುಹೂ ತಲುಪಿದ. ಅಲ್ಲಿಯ ಬೀಚಿಗೆ ಹೋದರೆ ಎಷ್ಟೊಂದು ಜನ ಸಮುದ್ರ, ಎಷ್ಟೊಂದು ಟಾಂಗಾ ಕುದುರೆಗಳು ಒಂಟೆಗಳು ಮಕ್ಕಳು, ಬಲೂನು ಇವೆಲ್ಲವುಗಳ ನಡುವೆ ದಗಡೂನೂ ಕಾಣುತ್ತಿಲ್ಲ. ಅವನನ್ನು ಹೊತ್ತ ಟಾಂಗಾವೂ ಕಾಣುತ್ತಿಲ್ಲ. ಕಾಲು ನೋಯುವ ತನಕ ಸುತ್ತಾಡಿದ. ಹೆಂಡಿರು ಮಕ್ಕಳನ್ನು ಒಂದೆಡೆ ಕಡಲೆ ಪೊಟ್ಟಣ ಕೊಟ್ಟು ಕೂಡ್ರಿಸಿ ಪುನಃ ಸುತ್ತಾಡಿ ದಣಿದು ಬಂದು ಕೂತ. ಅವನ ನಿರಾಸೆ ನೋಡಿ ಹೆಂಡತಿ ''ಸಿಗಲಿಲ್ಲವೆ. ದಗಡೂ ಸಿಕ್ಕಿದ್ದರೆ ಕಡೇ ಪಕ್ಷ ಆ ದಿನ ಮಂಟಪಕ್ಕೆ, ಮದುವೆಯೂಟಕ್ಕೆ ನಾವು ಮಾಡಿದ ಖರ್ಚನ್ನಾದರೂ ಕೇಳಬಹುದಿತ್ತು'' ಎಂದು ಗೊಂಯ್‌ಗುಟ್ಟಿದಳು ಅದಕ್ಕವನು ಅಳುಬುರುಕು ದನಿಯಲ್ಲಿ ರೇಗಿ ''ಛೇ. ಅಣ್ಣ ಅಂತ ನಾನು ಅಷ್ಟೂ ಮಾಡದಿದ್ದರೆ ಹ್ಯಾಗೆ?'' ಎಂದು ತೀರ ನಿರುಪಾಯನಾಗಿ ಸಮುದ್ರ ನೋಡಿದ.

ಬೆಂಗಳೂರು

ಫ್ಲೈ ಓವರಿನ
ಮೇಲೆ ಓಡಿ
ಕಂಪ್ಯೂಟರ್ ಕೀ ಒತ್ತಿ
ಬಸವಳಿದು ಮನೆ
ಸೇರಿ ಸ್ವಿಚ್ಚು ಒತ್ತಿದರೆ
ಫ್ಯಾನು ತಿರುಗಲು
ಕರೆಂಟೇ ಇಲ್ಲ!

- ಗೋಪಾಲಿ

ವಿಶಿಷ್ಟ ಜಾನಪದ ಗೀತಗಳು

- ಕಮಲಾ ರಾಮಸ್ವಾಮಿ

ಅಂದು ಸಂಜೆ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಜಾನಪದ ಗೀತೆಗಳ ಕಾರ್ಯಕ್ರಮ ಎಂದು ಕೇಳಿ ಸಂಭ್ರಮದಿಂದ ಹೊರಟೆ. ಡಾ|| ಎಲ್.ಜಿ. ಸುಮಿತ್ರ, ವಿಮಲ ರಾಜಗೋಪಾಲ್ ಮತ್ತು ಕಮಲ ಬಾಲು ಇವರುಗಳ ಹಾಡುಗಳನ್ನು ಕೇಳಿದ್ದು ಸುಮಾರು 4 ದಶಕಗಳ ಹಿಂದೆ. ಎಲ್.ಜಿ. ಸಹೋದರಿಯರ ಇನಿದನಿಯ ಗೀತೆಗಳನ್ನು ಮತ್ತೇ ಕೇಳುವ ಸದವಕಾಶ ದೊರೆತಿತ್ತು. ಬಹಳ ಆಶ್ಚರ್ಯವೆನ್ನಿಸಿದ್ದು ಅವರುಗಳ ಧ್ವನಿ ಸ್ವಲ್ಪವೂ ಕುಗ್ಗದೆ, ಅದೇ ಧಾಟಿ, ಅದೇ ಸುಸ್ವರದಲ್ಲಿ ಹಾಡಿದ್ದು.

ಪ್ರಕೃತಿಯ ಮಗುವಾಗಿ ಜೀವಿಸಿರುವ ಮನುಷ್ಯನಿಗೆ ಪರಿಪೂರ್ಣತೆ ತಾನಾಗಿಯೆ ಬರುತ್ತದೆ. ಏಕೆಂದರೆ ಪ್ರಕೃತಿಯ ನೇರ ಶಿಕ್ಷಣ ಪಡೆದು ಅನುಭವದ ತತ್ವಗಳನ್ನು ಸಹಜವಾಗಿ ಹಾಡುವ ಕಲೆ ಈ ಜಾನಪದ ಸಂಗೀತದ್ದು. ಹಳ್ಳಿಗಾಡಿನಲ್ಲಿ ಹುಟ್ಟಿ, ಬೆಳೆದುಬಂದ ಈ ಪದಗಳು ಸ್ವಯಂ ಸ್ಪೂರ್ತಿಯಿಂದ, ತಮಗಾದ ನೋವು, ನಲಿವಿನ ಅನುಭವದ ಗೀತಗಳು. ಇಲ್ಲಿಯ ಸಾಹಿತ್ಯ ಆಡು ಭಾಷೆಯ ಸರಳ, ಮನ ಮುಟ್ಟುವ, ಅರ್ಥಪೂರ್ಣ ನುಡಿಗಳು. ಇವರಿಗೆ ರಾಗ ಜ್ಞಾನವಾಗಲಿ, ಸ್ವರ ಸಂಯೋಜನೆ ಅಥವಾ ಶಾಸ್ತ್ರೀಯ ಸಂಗೀತದ ಪರಿಚಯವಿಲ್ಲ. ಆದರೆ ಹಾಡಿನಲ್ಲಿ ದನಿ, ಲಯ ಮತ್ತು ಗತಿ ಎಲ್ಲದರ ಸಮ್ಮಿಳನ ಈ ಜಾನಜಪದ ಸಂಗೀತ. ಹಳ್ಳಿಯ ಗುಡಿಸಲಿನಲ್ಲಿ, ರೈತರ ಬಡ ಜೀವನದ ದಿನಚರಿಯಲ್ಲಿ ಕಾಣುವ ವಿಶಿಷ್ಟ ಸೌಂದರ್ಯ ಈ ನಾಡ ಗೀತಗಳಲ್ಲಿ ಸರಳವಾಗಿ ಪ್ರತಿಬಿಂಬಿಸಲ್ಪಟ್ಟಿದೆ.

ಈ ಮುಗ್ಧ ಮನದ ಜನರಿಗೆ ದೇವರು ಆತ್ಮೀಯ ಗೆಳೆಯ. ಗುಡಿಯಲ್ಲಿ ಕುಳಿತ ಶಿಲೆಯಲ್ಲ. ಸಂಬಂಧಗಳಲ್ಲಿ ಸರಸ, ವಿರಸ, ಪ್ರೇಮ, ಸ್ನೇಹ ಎಲ್ಲ ಸುಂದರವಾಗಿ ಮೂಡಿ ಬರುವ ಮಾತಿನ ಸೊಗಡು, ಈ ನೆಲದ ಮಣ್ಣಿನ ಗಂಧವನ್ನು ಎಲ್ಲೆಡೆ ಪಸರಿಸಿ ಮುದ ನೀಡಿ, ಉಲ್ಲಾಸಗೊಳಿಸುವ ಹಾಡುಗಳು.

ಅಪರೂಪವಾಗಿರುವ ಲಾವಣಿ, ರಾಗಿ ಬೀಸುವ ಪದ, ಕೋಲಾಟದ ಪದ ಇವುಗಳನ್ನೆಲ್ಲಾ ಹಳ್ಳಿಯ ಹಾಡಿನ ದನಿ ಧಾಟಿಗೆ ಹೊಂದುವಂತೆ ಹಾಡಿರುವ ಎಲ್.ಜಿ. ಸಹೋದರಿಯರು ಅಭಿನಂದನಾರ್ಹರು. ಉತ್ತರ ದೇವಿಯ ಹಾಡು ಒಂದು ಕರುಣ ಕತೆ. ಸಮಾಜದ ಕರಾಳತೆಯ ಮುಖ ಇಲ್ಲಿದೆ. ಉತ್ತರೆ ಮಳೆಯ ಕತೆ ಇದು. ಹಾಡಿನ ಪ್ರತಿ ಸಾಲಿನಲ್ಲೂ ಕೇಳುವ ಸುಯ್ಯೋ ಎಂಬ ಶಬ್ದ ಅವಳ

ನಿಟ್ಟುಸಿರಿನ ಸುಯಿಲು. ಹಳೇಬೀಡಿನ ಪ್ರಾಂತದ ಈ ಪದ "ತಾನು ನೊಂದರೂ ನೆಲವ ತಣಿಸಿದ ಮಾತಾಯಿ". ಸರ್ಜಪ್ಪನಾಯಕನ ಲಾವಣಿ, ಚಾಮುಂಡಿ ಮತ್ತು ಜೋಗುಳದಂತಹ ಉತ್ತಮ ನಾಡಗೀತಗಳ ಸಂಕಲನದ ಕ್ಯಾಸೆಟ್ ಮತ್ತು ಸಿ.ಡಿ.ಗಳನ್ನು ಎಲ್.ಜಿ. ಸಹೋದರಿಯರು ತಂದಿದ್ದಾರೆ. ಲಹರಿ ರೆಕಾರ್ಡಿಂಗ್ ಕಂಪನಿ ಈ ಸಿ.ಡಿ. ಮತ್ತು ಕ್ಯಾಸೆಟ್ ತಯಾರಿಸಿದ್ದಾರೆ (ದೂರವಾಣಿ ಸಂಖ್ಯೆ: 661033). ಒಮ್ಮೆ ಕೇಳಿದರೆ, ತಮ್ಮದಾಗಿರಿಸಿಕೊಳ್ಳುವ ಆಸೆ ಹುಟ್ಟಿಸುವ ಈ ನಾಡಗೀತೆಗಳು ಮೆಚ್ಚಿಕೆಯಾಗುವುದರಲ್ಲಿ ಸಂಶಯವಿಲ್ಲ.

ಡಾ|| ಎಲ್.ಜಿ. ಸುಮಿತ್ರ ಅವರು ಪಿ.ಹೆಚ್.ಡಿ. ಪದವಿ ಪಡೆದಿರುವುದು ಮತ್ತು ಸಂಶೋಧನೆ ಮಾಡಿರುವುದು ಜಾನಪದ ಸಂಗೀತ ಮತ್ತು ಸಾಹಿತ್ಯದಲ್ಲಿ. ಈ ಮೂವರು ಸಹೋದರಿಯರಿಗೂ ಶುಭ ಕೋರಿ ಅಭಿವೃದ್ಧಿ ಹಾರೈಸುವೆ.

ದಾಂಪತ್ಯ

ಹೊಸ
ದಾಂಪತ್ಯದಲ್ಲಿ
ಇತ್ತೀಚಿಗೆ
ವಿಪರೀತ
ಖಾರ!
ಅಂತಹ
ವಿಶೇಷವೇನಿಲ್ಲ
ಅವನ
ಸಂಬಳಕ್ಕಿಂತಲೂ
ಇವಳು
ಕೊಂಡ ಸೀರೆ
ತುಸು ಹೆಚ್ಚು
ಖಾರ!!

– ಪಿ. ಅಶೋಕ್ ಡಿಸಲೆ



Down Hole Hammers
&
Button Bits



Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR